ಛೇರ್ಮನ್:- ಎರಡೂ ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.

ದ.ಅ. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.

ವಿಷಯ:- ಗ್ರಾನೈಟ್ ವ್ಯವಹಾರದ ಬಗ್ಗೆ ಉಚ್ಛ ನ್ಯಾಯಾಲಯ ನೀಡಿರುವ ತೀರ್ಪಿನಿಂದ ಉದ್ಭವಿಸಿರುವ ವಿಶೇಷವಾದ ಪರಿಸ್ಥಿತಿ.

+ ಶ್ರೀ ಡಿ.ಬಿ.ಚಂದ್ರೇಗೌಡ:- ತಾವು ಮುಂದಿನ ಕಾರ್ಯಕಲಾಪಗಳಿಗೆ ಹೋಗುವುದಕ್ಕೆ ಮುನ್ನ ಸಾರ್ವಜನಿಕ ಮಹತ್ವದ . . . .

ಛೇರ್ಮನ್:- ತಾವು ಯಾವುದರ ಬಗ್ಗೆ ಹೇಳುತ್ತೀರಿ ಎಂಬುದು ಗೊತ್ತಾಗಲಿಲ್ಲ.

ಒಬ್ಬ ಮಾನ್ಯ ಸದಸ್ಯರು :- ಈಗ 334ರ ನಿಯಮದ ಮೇರೆಗೆ ಇರತಕ್ಕ ವಿಷಯಗಳನ್ನು ತೆಗೆದುಕೊಳ್ಳಿ, ಅದಾದ ನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳಿ. . . .

ಶ್ರೀ ಡಿ.ಬಿ. ಚಂದ್ರೇಗೌಡ :- ನಾನು ನಿಯಮ 59ರ ಮೇರೆಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಈ ನಿಲುವಳಿ ಸೂಚನೆಯನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ಬಗ್ಗೆ ನಿಯಮ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿದ್ದರೆ ಅದನ್ನು ಓದಿ ಹೇಳುತ್ತೇನೆ.

ಛೇರ್ಮನ್ :- ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೋ ಕೇಳೋಣ. ನಂತರ ವಿಚಾರ ಮಾಡೋಣ.

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆ, ನಿಯಮ 59ರ ಪ್ರಕಾರ, it takes precedence over other business. Please try to understand the rules of business. ಇತ್ತೀಚೆಗೆ ರಾಜ್ಯದ ಉಚ್ಛ ನ್ಯಾಯಾಲಯ ಕೊಟ್ಟ ಒಂದು ತೀರ್ಪಿನ ಪರಿಣಾಮವಾಗಿ, ಉದ್ಭವಿಸಿರತಕ್ಕ ಗಂಭೀರವಾದ ಸಮಸ್ಯೆಯನ್ನು ವಿಶೇಷವಾಗಿ ನಿಲುವಳಿ ಸೂಚನೆ ಮೂಲಕ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಮೊನ್ನೆ ತಾನೆ ಕರ್ನಾಟಕ ರಾಜ್ಯದ ಉಚ್ಛ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದೆ. ಈ ತೀರ್ಪಿನ ಪರಿಣಾಮ ಏನೆಂದರೆ, ರಾಜ್ಯಕ್ಕೆ ಬರತಕ್ಕಂಥ ಆದಾಯದ ಒಂದು ಭಾಗವಾದ ಮತ್ತು ವಿದೇಶಿ ವಿನಿಮಯ ಗಳಿಸತಕ್ಕಂಥ ಶಿಲೆಯ ವ್ಯವಹಾರ ಏನಿದೆ, ಈ ವ್ಯವಹಾರಕ್ಕೆ ರಾಜ್ಯಸರ್ಕಾರದವರು ದಿನಾಂಕ 18-6-91 ರಲ್ಲಿ ಲೈಸೆನ್ಸ್ ಕೊಡುವುದಕಾಗಿಯೇ, ಶಾಸನವನ್ನು ತಿದ್ದುಪಡಿ ಮಾಡಿ, ನಿಯಮಗಳನ್ನು ರಚನೆ ಮಾಡಿದ್ದರು, ಅದು ಅನೂರ್ಜಿತ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಆದರೆ ಇವತ್ತು ಇಡೀ ರಾಜ್ಯದಲ್ಲಿ ಒಂದು ರೀತಿಯ ವಿಶೇಷವಾದ ವಾತಾವರಣ ಉಂಟಾಗಿದೆ. ಈ ವಾತಾವರಣದಿಂದಾಗಿ ಪರವಾನಗಿ ಪಡೆದಿರತಕ್ಕಂಥವರಿಗೆ ಮುಂದೆ ಏನು ಮಾಡಬೇಕೆನ್ನುವುದು ಗೊತ್ತಿಲ್ಲ. ಪರವಾನಗಿ ಕೊಟ್ಟ ಸರಕಾರ ತನ್ನ ವ್ಯಾಪ್ತಿಯೊಳಗೆ ಕೊಟ್ಟಿದೆಯೇ ಇಲ್ಲವೇ, ಎಂಬುದನ್ನು ಆಲೋಚನೆ ಮಾಡಿ ಮರು ಪರಿಶೀಲನೆ ಮಾಡತಕ್ಕಂಥ ಒಂದು ಸಂದರ್ಭ ಮತ್ತು ರಾಜ್ಯದ ಬೊಕ್ಕಸಕ್ಕೆ ಬರುವ ಇಷ್ಟು ದೊಡ್ಡ ಪ್ರಮಾಣದ ಆದಾಯ ಒಂದು ರೀತಿ ಏನು ಸ್ಥಗಿತಗೊಂಡಿದೆ, ಇದರ ಪರಿಣಾಮ ತುಂಬಾ ದೊಡ್ಡ ಪ್ರಮಾಣದಲ್ಲಿ ರಾಜ್ಯದಲ್ಲಿ ಆಗಬಹುದು. ಆದುದರಿಂದ ಇಂತಹ ಒಂದು ವಿಶೇಷ ಸಂದರ್ಭವನ್ನು ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯ ಮೂಲಕ ತಮ್ಮ ಅನುಮತಿಯನ್ನು ಕೇಳುವುದಕ್ಕೆ ನಾನು ಇಲ್ಲಿ ನಿಂತುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷಿಣಿಯವರೇ, 1957 ರಲ್ಲಿ ಕೇಂದ್ರ ಸರಕಾರ ತಂದ ಒಂದು ಶಾಸನದ ಅಡಿಯಲ್ಲಿ ರಾಜ್ಯ ಸರಕಾರಕ್ಕೆ ಮೈಸೂರ್ ಮಿನರಲ್ ಮೈನಿಂಗ್ ಆಕ್ಟ್ ರೂಲ್ಸ್ ಫ್ರೇಮ್ ಮಾಡುವ ಅವಕಾಶ ಏನು ಕೊಟ್ಟಿತ್ತು ಅದರ ಪ್ರಕಾರ ರಾಜ್ಯ ಸರಕಾರಗಳು ಕಾಲ ಕಾಲಕ್ಕೆ ಏನು ಪರವಾನಗಿಯನ್ನು ಕೊಡುತ್ತಾ ಬಂದರು, ಅದು ಒಂದು ಉತ್ತುಂಗ ಶಿಖರವನ್ನು ತಲುಪಿದಮೇಲೆ ನ್ಯಾಯ ಮೂರ್ತಿ ಶ್ರೀಮಾನ್ ರಾಜೇಂದ್ರ ಬಾಬು ಅವರು 16-3-92 ರಲ್ಲಿ, ಇದು ನನಗೆ ಸಿಕ್ಕಿರತಕ್ಕಂಥ ಕಾಪಿಯಲ್ಲಿ ಇರತಕ್ಕಂಥ ತಾರೀಖು, ಈ ತಾರೀಖಿಗೆ, ರಾಜ್ಯದ

ದೃಷ್ಟಿಯಿಂದ ತುಂಬಾ ಆಲೋಚನೆ ಮಾಡಿ ಮತ್ತು ಇದ್ದ ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿಗೆ ಕಾರಣ ಈ ನಮ್ಮ ಮೈನ್ಸ್, ಮಿನರಲ್ಸ್ ರೆಗ್ಯುಲೇಷನ್ ಅಂಡ್. ಡೆವಲಪ್‌ಮೆಂಟ್ ಆಕ್ಟ್ 1957, ಇದು ಕೇಂದ್ರದ ಒಂದು ಶಾಸನ, ಈ ಶಾಸನದ15 ನೇ ವಿಧಿಯಲ್ಲಿ ರಾಜ್ಯ ಸರಕಾರಗಳು ತಮ್ಮದೇ ಆದಂಥ ರೂಲ್ಸ್ ರಚನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುತ್ತದೆ. ಈ ಅವಕಾಶವನ್ನು ಬಳಸಿಕೊಂಡು ಕರ್ನಾಟಕ ಮಿನರಲ್ಸ್ ಕನ್‌ಸೆಷನ್ ರೂಲ್ಸ್ ಅಫ್ 1969 ಈ ಒಂದು ಶಾಸನವನ್ನು ಮಾಡಿರುತ್ತಾರೆ. ಅದರಲ್ಲಿ ಈ ಒಂದು ಕ್ವಾರಿಯಿಂಗ್ ಲೈಸೆನ್ಸ್ ಕೊಡುವುದರಲ್ಲಿ ಮೂರು ಭಾಗವಾಗಿ ಮಾಡಬಹುದು. ಖಾಸಗಿ ಜಮೀನಿಗೆ ಕೊಡತಕ್ಕಂಥ ಲೈಸೆನ್ಸ್, ಅರಣ್ಯ ಇಲಾಖೆಗೆ ಸೇರಿದಂಥ ಭೂಮಿಗೆ ಕೊಡತಕ್ಕಂಥ ಲೈಸೆನ್ಸ್ ಮತ್ತು ರೆವಿನ್ಯೂ ಇಲಾಖೆಗೆ ಸೇರಿದಂಥ ಭೂಮಿಗೆ ಕೊಡತಕ್ಕಂಥ ಲೈಸೆನ್ಸ್, ಈ ರೀತಿ ಮೂರು ಭಾಗ. ಈ ಮೂರು ಭಾಗಕ್ಕೆ ಪರವಾನಗಿ ಕೊಡುವುದಕ್ಕೆ ಅವಕಾಶ ಏತಕ್ಕೆ ಕೊಡುತ್ತಾರೆ ಎಂದರೆ, ಅದು ಅತ್ಯಂತ ಅವಶ್ಯಕವಾಗಿರತಕ್ಕಂಥ ಮತ್ತು ಈ ರಾಷ್ಟ್ರದ, ಈ ರಾಜ್ಯದ ಆಗತ್ಯಕ್ಕೆ ಬೇಕಾಗಿರತಕ್ಕಂಥ ವಿದೇಶಿ ವಿನಿಮಯವನ್ನು ಗಳಿಸತಕ್ಕಂಥ ಒಂದು ಖನಿಜವಾದುದರಿಂದ, ಈ ಖನಿಜದ ಪೂರ್ಣ ಹತೋಟಿ ಕೇಂದ್ರ ಸರಕಾರದಲ್ಲಿ ಇದ್ದರೂ ಇದನ್ನು ವಿತರಣೆ ಮಾಡತಕ್ಕ ಮತ್ತು ಒಂದು ರೀತಿಯಲ್ಲಿ ಅದಕ್ಕೆ ಬೇಕಾದಂಥ ಕಂಟ್ರೋಲ್ ಇಟ್ಟುಕೊಳ್ಳತಕ್ಕಂಥ ಅಧಿಕಾರವನ್ನು ರಾಜ್ಯಸರಕಾರಕ್ಕೆ ಕೊಡುತ್ತದೆ. ಆ ಅಧಿಕಾರವನ್ನು ಬಳಸಿ ಹಿಂದೆ ಪರವಾನಗಿಯನ್ನು ಕೊಡುತ್ತಿದ್ದರು. ಈ ಪರವಾನಿಗೆಗಳನ್ನು 1979ರಲ್ಲಿ ಪುನರ್ ಪರಿಶೀಲನೆ ಮಾಡಿದರು. ಈ ಪುನರ್ ಪರಿಶೀಲನೆಗೆ ಕಾರಣ ಏನೆಂದರೆ ಹಿಂದೆ ಯಾರಿಗೆ ಬೇಕಾದರೂ ಪರವಾನಿಗೆ ಕೊಡಬಹುದು, ಈ ಪರವಾನಿಗೆಗಳು ಹೀಗೆ ಕೊಡುವುದರಿಂದ ರಾಜ್ಯದ ಸಂಪತ್ತು ಲೂಟಿಯಾಗುತ್ತದೆ, ಖಾಸಗಿಯವರು ಈ ಒಂದು ಲಾಭದ ಬಹು ಲಾಭಾಂಶವನ್ನುಗಳಿಸುತ್ತಾರೆ. ಪೂರ್ಣವಾದಂತಹ ಲಾಭ ರಾಜ್ಯದ ಬೊಕ್ಕಸಕ್ಕೆ ರಾಜ್ಯದ ಖಜಾನೆಗೆ ಬರಬೇಕು ಹಾಗೆ ರಾಜ್ಯದ ಬೊಕ್ಕಸಕ್ಕೆ ಮತ್ತು ಖಜಾನೆಗೆ ನೇರವಾಗಿ ಬರಬೇಕು ಎಂದಾದರೆ ಇದನ್ನು ಖಾಸಗಿಯವರಿಗೆ ಲೀಜ್‌ಗೆ ಕೊಡುತ್ತಿದ್ದಂತಹ ಪರವಾನಿಗೆ ಏನು ಇದೆ ಇದರಿಂದ ಅಪಾಯ ತಟ್ಟುತ್ತದೆ ಎನ್ನುವ ಕಾರಣದಿಂದ 1979 ರಲ್ಲಿ ರೂಲ್ಸ್ (3)ಎ ಎನ್ನತಕ್ಕಂಥಾದ್ದನ್ನು ಜಾರಿಗೆ ತಂದು . . . .

Sri Blasius.M.D'souza:- Madam, point of order. . ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದಲ್ಲಿ ಬಹಳ ವಿಸ್ತಾರವಾಗಿ ಹೋಗುತ್ತಿದ್ದಾರೆ. The Leader of the Opposition is going in details. This subject has been discussed in this House many times and the Ruling has already been given by the Chair on many occasions. Therefore, the Leader of the Opposition should confine himself as to what has happened after the judgement. So, he need not go to all the details regarding Mining Act as well as Leases. I would request the Hon'ble Speaker to rule that he should confine himself what has happened after the judgement. .

ಶ್ರೀ ಎಂ.ವಿ.ವೆಂಕಟಪ್ಪ:- ತಾವು ಕನ್ಸೆಂಟ್ ಕೊಟ್ಟ ಮೇಲೆ ಬೇಕಾದರೆ ಅವರು ಡೀಟೇಲ್ ಆಗಿ ಹೇಳಬಹುದೇ ಹೊರತು, ತಮ್ಮ ಕನ್ಸೆಂಟ್‌ಗೆ ಅವರು ಸಂಕ್ಷಿಪ್ತವಾಗಿ ಹೇಳಬಹುದು.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ಅದಲ್ಲ, ಕನ್ಸೆಂಟನ್ನು ಅವರು ಕೇಳುವಾಗ ನಾನು ಕನ್ಸೆಂಟ್‌ಗೆ ಕಾರಣ ಹೇಳಬೇಡವೇ ? ಏಕೆಂದರೆ, ಇದು ಅನೇಕ ಸಾರಿ ಚರ್ಚೆ ಆಗಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ಕಾನೂನು ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಚರ್ಚೆಯ ಪರಿಣಾಮ ಏನಾಗಿದೆಯೆಂದರೆ, ಅದರ ಪರಿಣಾಮ ಎಷ್ಟು ದೂರಕ್ಕೆ

ಹೋಯಿತು ಎಂದರೆ ಈ ಶಾಸನ ಸಭೆಯಲ್ಲಿ . . . .

(ಗೊಂದಲ)

ಶ್ರೀ ಎಂ.ವಿ.ವೆಂಕಟಪ್ಪ:- ಸಂಕ್ಷಿಪ್ತವಾಗಿ ಹೇಳಬೇಕು . . . .

Sri D.B.Chandregowda:- I really appreciate the stand taken by the Government. . .ಇದರಲ್ಲಿ ಒಂದು ಸದನದ ಸಮಿತಿ ಮಾಡುವುದಕ್ಕೂ ಕೂಡ ಒಪ್ಪಿಕೊಂಡರು. ಆ ಸಮಿತಿ ಕೂಡ ಇದನ್ನು ಪರಿಶೀಲನೆ ಮಾಡುತ್ತಿದೆ. ಹೀಗಾಗಿ ನಾನು ತಮಗೆ ಏನು ಹೇಳುತ್ತೇನೆಂದರೆ . . . .

ಛೇರ್ಮನ್:- ವಿರೋಧ ಪಕ್ಷದ ನಾಯಕರು ಸಂಕ್ಷಿಪ್ತವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು 2-3 ನಿಮಿಷದಲ್ಲಿ ಮುಗಿಸುತ್ತೇನೆ. ಏತಕ್ಕೆ ಈ ಪ್ರಸ್ತಾವ ಬಂದಿದೆ ಎಂದು ಹೇಳಿದರೆ, ಅನೇಕ ಸಾರಿ ಇದು ಕಾನೂನು ಮಂತ್ರಿಗಳು ಹೇಳಿದಹಾಗೆ ಚರ್ಚೆ ಆಗಿದೆ.

(ಗೊಂದಲ)

Sri.Blaisus.M.D'souza:- I have raised a point of order . . ಇದರ ಮೇಲೆ ತಾವು ರೂಲಿಂಗ್ ಕೊಡಬೇಕು. ಇದು ಪುನ: ಪುನ: ಚರ್ಚೆಯಾಗುವುದರಲ್ಲಿ ಪ್ರಯೋಜನವಿಲ್ಲ.

(ಗೊಂದಲ)

ಛೇರ್ಮನ್:- ನೀವು ಡೀಟೇಲ್ಸ್‌ಗೆ ಹೋಗುತ್ತಿದ್ದೀರಿ ಎಂದು ಅವರು ಹೇಳುವುದು.

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ಅವರ ಪಾಯಿಂಟ್ ಆಫ್ ಆರ್ಡ್‌ರ್‌ಗೆ ಉತ್ತರ ಹೇಳುತ್ತಿದ್ದೇನೆ. ಅವರು ಪಾಯಿಂಟ್ ಆಫ್ ಆರ್ಡ್‌ರ್ ಏನು ಎತ್ತಿದ್ದಾರೆ ಎಂದರೆ ಇದು ಬೇಕಾದಷ್ಟು ಸಾರಿ ಚರ್ಚೆ ಆಗಿದೆ. . .

(ಗೊಂದಲ)

ಶ್ರೀ ಕರಿಯಣ್ಣ:-ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟನಂತರ ವಾಟಾಳ್‌ನಾಗರಾಜ್ ರವರದ್ದು ಕೆಳಗಡೆ ಅದೇ ಸಬ್ಜೆಕ್ಟ್ ಇದೆ. ಈಗ ಹೇಳುವುದಕ್ಕೆ ಅವರು ತಮಗೆ ಅರ್ಜಿ ಕೊಟ್ಟಿದ್ದಾರೇನು . . .

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಇದೇನು ಇದು, ಯಾರು ಬೇಕಾದರೂ ಯಾವಾಗ ಬೇಕಾದರೂ ಎದ್ದು ನಿಂತು ಮಾತನಾಡಬಹುದೇ? ತಮ್ಮ ಪರ್ಮಿಶನ್ ಬೇಡವೇ ?

ಶ್ರೀ ಕರಿಯಣ್ಣ:- ತಾವು ಚೆನ್ನಾಗಿ ಭಾಷಣ ಮಾಡುತ್ತೀರಿ ಎಂದು ನಮಗೆ ಗೊತ್ತಿದೆ. ನಿಲುವಳಿ ಸೂಚನೆ ಬಗ್ಗೆ ಮಾತನಾಡಲು ಒಪ್ಪಿಗೆ ಕೊಟ್ಟಿದ್ದರೆ ಆಗಬಹುದು. . . .

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:-ಮಾನ್ಯ ಅಧ್ಯಕ್ಷರೇ, ಅವರಿಗೆ ದಯವಿಟ್ಟು ತಮ್ಮ ಆಜ್ಞೆ ಪಾಲಿಸಲಿಕ್ಕೆ ಹೇಳಿ.

ಛೇರ್ಮನ್:- ಕರಿಯಣ್ಣನವರೆ, ಕುಳಿತುಕೊಳ್ಳಿ . . . .

ಶ್ರೀ ಕರಿಯಣ್ಣ:- ಅವರು ನಿಲುವಳಿ ಸೂಚನೆ ಮೇಲೆ ಸಂಪೂರ್ಣವಾಗಿ ಭಾಷಣ ಮಾಡಲು ಹೊರಟಿದ್ದಾರೆ. . .

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ನಿಲ್ಲುವುದಕ್ಕೆ ಪರ್ಮಿಶನ್ ಇಲ್ಲ.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ . . .

ಛೇರ್ಮನ್:- ಕುಳಿತುಕೊಳ್ಳಿ, ಅವರಿಗೆ ಸಂಕ್ಷಿಪ್ತವಾಗಿ ಮಾತನಾಡಲಿಕ್ಕೆ ಹೇಳಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ:- ನೀವು ಪರವಾನಿಗೆ ಕೊಟ್ಟರೆ ನಾನು ಪೂರ್ತಿ ಡೀಟೇಲ್ಸ್‌ಗೆ ಹೋಗುತ್ತೇನೆ. ತಕ್ಷಣ ಉದ್ಭವವಾಗಿರತಕ್ಕಂಥ ಪರಿಸ್ಥಿತಿ ಏನು? ತತ್‌ಕ್ಷಣ ಉದ್ಭವವಾಗಿರತಕ್ಕಂತಹ ಪರಿಸ್ಥಿತಿ ಏನೆಂದರೆ, ಉಚ್ಚ

ನ್ಯಾಯಾಲಯದಿಂದ ಒಂದು ತೀರ್ಪು ಬಂದಿದೆ. ಆ ತೀರ್ಪಿನಿಂದ ಒಟ್ಟು ಗ್ರಾನೈಟ್ ವ್ಯವಹಾರ ಸ್ಥಗಿತವಾಗಿದೆ. ಒಟ್ಟು ಗ್ರಾನೈಟ್ ವ್ಯವಹಾರವೇ ಸ್ಥಗಿತಗೊಂಡಿದೆ. ರಾಜ್ಯಕ್ಕೆ ಬರತಕ್ಕಂಥ ಆದಾಯ ನಷ್ಟವಾಗಿದೆ. ನೀವು ಆಯವ್ಯಯ ಅಧಿವೇಶನ ಎಂದು ಹೇಳುತ್ತೀರಿ. ಇದರ ಬಗ್ಗೆ ಬೆಳಕು ಚೆಲ್ಲುವುದು ಅತ್ಯಂತ ಅವಶ್ಯಕವಾಗಿದೆ. ನೀವು ಬಹುಶ: ಇವತ್ತು ಅಪ್ರೊಪ್ರಿಯೇಷನ್ ಬಿಲ್ ತಂದು ಈ ಸದನವನ್ನು ಅನಿರ್ಧಿಷ್ಟ ಕಾಲದವರೆಗೂ ಮುಂದೂಡಲಾಗಿದೆ ಎಂದು ಅನಿಸಿಕೊಂಡು ಹೋಗಬಹುದು. ಆದರೆ ಈ ವಿಚಾರದಲ್ಲಿ ಸರ್ಕಾರದ ನಿಲುಮೆಯನ್ನು ನಾನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದ ಕಾರಣ ಈ ಹೈಕೋರ್ಟ್ ತೀರ್ಪಿನಿಂದ ಉದ್ಭವವಾಗಿರತಕ್ಕಂತಹ ವಿಶೇಷ ಪರಿಸ್ಥಿತಿಯನ್ನು ಚರ್ಚೆ ಮಾಡುವುದಕ್ಕಾಗಿ ನಾನು ತಮ್ಮ ಅನುಮತಿಯನ್ನು ಕೇಳುವಾಗ ಸಂಕ್ಷಿಪ್ತವಾಗಿ ಏನು ನಡೆದಿದೆಯೆಂದು ಹೇಳಬೇಡವೇ? ತೀರ್ಪು ಏನು ಬಂದಿದೆ? ಏಕೆ ಬಂತು? ಮುಂದೆ ಆಗಬಹುದಾದ ಪರಿಣಾಮಗಳು ಏನು? ಇದರ ಸಲಹೆ ಸೂಚನೆಗಳನ್ನು ತಿಳಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಇಷ್ಟೇ ಹೇಳುತ್ತಿರುವುದು. ನಾನು ಏನು ಹೇಳುತ್ತಿದ್ದೇನೆ ಎಂದರೆ. . . .

ಛೇರ್ಮನ್:- ವಿವರಕ್ಕೆ ಹೋಗಬೇಡಿ.

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ವಿವರಗಳಿಗೆ ಹೋಗುತ್ತಿಲ್ಲ. ಈ ಶಾಸನಕ್ಕೆ ಎಷ್ಟು ಬಾರಿ ತಿದ್ದುಪಡಿಯಾಗಿದೆ. ಈ ತಿದ್ದುಪಡಿ ನಾನು ಓದಿದ್ದೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಏತಕ್ಕೋಸ್ಕರ ತಮ್ಮ ಕ್ರಿಯಾಲೋಪ ಎತ್ತಿದ್ದರು ಎಂದರೆ, ಅದಕ್ಕೆ ಕೆಲವು ಕಾರಣಗಳು ಇವೆ. ತಾವು, ರೂಲ್ 63ರ ಪ್ರಕಾರ it should be of a recent occurrence. Now, this is not recent occurrece therefore, it cannot be allowed. The Hon.Member may be having his own reasons. But, under clause (3) of rule 61 of the Rules of Procecure and conduct of Business of this House, he should have made use of his right to obtain the copy of the judgement passed by the Karnataka High Court. With great respect I should say, the Hon.leader of the opposition has lost his right to move or to have his say even to get the consent of the Chair to move the adjournment motion. Therefore, I think, the point of order raised by my collegue the Honble Law Minister has got a point for your consideration. Therefore, on this account alone consent should be with held and no consent shall be given. He is trying to dwell upon the details and merits of the matter. That arises only when the consent is given by the Chair; not before that. Therefore, I don't think under clause 3 of Rule 61, you can get the consent of the Hon'ble Speaker. Therefore, I appeal to the Hon'ble leader of the opposition through you sir, to see the reasons under clause 3, that is all my point. Hope you will accept this and then you will inform the members about it.

Sri D.B.CHANDREGOWDA:- Let me explain the position first. It is true that the judgement was passed on 13.3.92. 14th and 15th happens to be Saturday and Sunday, being holidays. I tried to contact the Advocate General. I am trying to give the facts. I trived to contact the Advocate General and asked him to supply the copy of the judgement. To my misfortune, what should I say, I don't Know, the Advocate General chose not to supply the copy of the judgement.

Sri. S.BANGARAPPA:- You should have taken the copy of the judgement.

Sri.D.B.CHANDREGOWDA:- I know. There I applied for the copy through some body, I got a copy only on 18.3.1992. I am very much on my right track. The Hon'ble leader of the House has asked me to explain. I am trying to explain all the circumstances and problems to the House. The earlier oppurtunity I got is the last week. I am sorry to say that I could not do that. Again saturday and Sunday, I tried to get into the speaker's room. I could not meet the Hon'ble Speaker or Deputy Speaker. Unfortunately, I am told, he is not well. These are certain facts. Yesterday I have sent the notice for moving the Adjournment Motion. ಟೆಕ್ನಿಕಲಿ 8-10 ದಿನಗಳ ಡಿಲೇ ಅರ್ಜೆನ್ಸಿ ಇಲ್ಲ ಎಂದು ತಾಂತ್ರಿಕ ಕಾರಣಗಳಿಗಾಗಿ ಕಾನೂನನ್ನು ಹೊಡೆದು ಹಾಕುವುದಾದರೆ ಮುಂದೆ ರಾಜ್ಯದ ಹಿತದೃಷ್ಟಿಯಿಂದ ಆಗಬಹುದಾದಂಥ ಅಪಾಯಕಾರಿ ಬೆಳವಣಿಗೆಯ ಸೂಚನೆಯನ್ನು ಈ ಸದನದ ಮೂಲಕ ರಾಜ್ಯದ ಜನತೆಗೆ ಕೊಡುತ್ತಾ ಇದ್ದೇವೆ ಎಂಬುದನ್ನು ಗಮನಿಸಬೇಕು. ಮುಖ್ಯವಾಗಿ ಇರತಕ್ಕಂಥಾದ್ದು, ತಾಂತ್ರಿಕವಾಗಿ ತಡವಾಗಿದೆ. ಆದ್ದರಿಂದ ಇದನ್ನು ಕಿತ್ತು ಬಿಸಾಕಿ ಬಿಡಿ ಎನ್ನತಕ್ಕಂಥಾದ್ದು ಆದರೆ ನನ್ನದೇನೂ ಅಬ್‌ಜಕ್ಷನ್ ಇಲ್ಲ. So, I tried to present my case at the earliest. Therefore, ರೂಲ್ 61(3) ನಲ್ಲಿ ಏನು ರಿಸ್ಟ್ರಿಕ್ಷನ್ಸ್ ಇದೆ, ಇಮ್ಮೀಡಿಯೆಟ್ ರೀಸಂಟ್ ಅಕ್ಕರನ್ಸ್ ಅಂದು ಬಿಟ್ಟರೆ ನಿನ್ನೆ ಅಲ್ಲಿ ಏನೋ ಒಂದು ಕೊಲೆಯಾಗಿದೆ, ಎಂದು ಹೇಳಿದರೆ ನಾನೇನೂ ಹೋಮ್ ಮಿನಿಸ್ಟರ್ ಅಲ್ಲ, ನಾನು ಫೋನ್ ಮಾಡಿದ ತಕ್ಷಣ ಪೋಲೀಸರು ನನಗೆ ಸುದ್ದಿಯನ್ನು ತಿಳಿಸುವುದಿಲ್ಲ. I have to contact the Hon'ble Home Minister for Home Affairs and request him to send the information either directly through him or through some of his officers. This is a matter of Highest Court of the state giving the judgement. I should be very careful. I need sometime to study. I have to apply my mind. ಆ ಜಡ್ಜ್‌ಮೆಂಟನ್ನು ಹಿಡಿದುಕೊಂಡು ಬಂದು ಬೆಳಿಗ್ಗೆ ಇಲ್ಲಿ ಅಡ್ಜರ್‌ಮೆಂಟ್ ಮೋಷನ್ ಮಾಡುವಂಥ ಕೆಲಸ ಆಗುವುದಿಲ್ಲ. ನಿನ್ನೆ ಮಾನ್ಯ ಸಂಸದೀಯ ಮಂತ್ರಿಗಳು ಅಲೋಚನೆ ಮಾಡಿ ತೀರ್ಮಾನ ಮಾಡಿ , ತೀರ್ಮಾನ ಮಾಡಿ ಆಲೋಚನೆ ಮಾಡಬೇಡಿ ಎಂದು ಹೇಳಿದರು. ಆದ್ದರಿಂದ ಆಲೋಚನೆ ಮಾಡಿ ತೀರ್ಮಾನ ಮಾಡುವುದಕ್ಕೆ ನನಗೆ ಸಮಯ ಬೇಕು. ಎರಡನೆಯದಾಗಿ, ತೀರ್ಮಾನ ಬಂದ ತಕ್ಷಣವೇ ಏನಾದರೂ ಸರಕಾರದವರು ಇದರ ಮೇಲೆ ಆಕ್ಟ್ ಮಾಡಬಹುದು, ತಪ್ಪು ಎಂದು

ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳತಕ್ಕಂಥ ಸೌಜನ್ಯವನ್ನು ತೋರಬಹುದು, ಮುಖ್ಯಮಂತ್ರಿಗಳು ಆರ್ಥಿಕ ಮಂತ್ರಿಗಳಾಗಿ ಆಯವ್ಯಯಕ್ಕೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಇದರ ಬಗ್ಗೆ ಬೆಳಕು ಚೆಲ್ಲಬಹುದು. ಇಲ್ಲಿಯಾದರೂ ಹೇಳಬಹುದಿತ್ತು, ಆ ಮನೆಯಲ್ಲಿಯಾದರೂ ಹೇಳಬಹುದಿತ್ತು. ಅವರು ನಿನ್ನೆ ಎರಡು ಘಂಟೆಗಳ ಕಾಲ ಮೇಲ್ಮನೆಯಲ್ಲಿ ಉತ್ತರವನ್ನು ಹೇಳಿದ್ದಾರೆ. ಆಗ ಪ್ರಸ್ತಾಪ ಮಾಡಬಹುದಾಗಿತ್ತು. ಹಾಗೆ ಪ್ರಸ್ತಾಪ ಮಾಡಲಿಲ್ಲವಾದುದರಿಂದ This is the earliest opportunity for me. ಅವರೇನಾದರೂ ನಿನ್ನೆ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ As you rightly pointed out..... I lost right to present my case to day. Therefore, ನಿನ್ನೆಯ ತನಕ ನಾವು ಕಾದಿದ್ದೇವೆ. ನಿಮ್ಮ ಬಜೆಟ್‌ನ ಉತ್ತರದಲ್ಲಿ ಹೇಳಲಿಲ್ಲ, ನಿಮ್ಮ ಪೂರಕವಾದಂಥ ಬೇಡಿಕೆಗಳನ್ನು ಏನು ಇಲ್ಲಿ ಇಟ್ಟಿದ್ದಿರಿ, ಆ ಚರ್ಚೆಯಲ್ಲಿಯೂ ನೀವು ಪ್ರಸ್ತಾಪ ಮಾಡಲಿಲ್ಲ. ಅಲ್ಲದೆ ಇನ್ನಾವುದೇ ರೂಪದಲ್ಲಿ ಸರಕಾರದವರು ಪ್ರಸ್ತಾಪ ಮಾಡಲಿಲ್ಲ.

ಶ್ರೀ ಎಂ.ಎಲ್.ಉಸ್ತಾದ್ :-ನನ್ನ ಡಿಮ್ಯಾಂಡ್‌ಗೆ ಉತ್ತರ ಕೊಡುವಾಗ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ.

SRI D.B.CHANDREGOWDA :- Pointedly I referred to the Finance Miniser of State because. . .ನಾನು ಪ್ರಾರಂಭದಿಂದ ಏನು ಹೇಳಿದ್ದೇನೆ, ಅನಿವಾರ್ಯವಾಗಿ ಈ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥ ಹಣ. He is concerned with the dealings. As far as the Finance Minister is concerned, he is concerned with the amount that is expected to come to the State exchequer. To that extent I expected the Finance Minister to reply, not from the Minister concerned. ಈ ಒಂದು ವಿಚಾರದಲ್ಲಿ ಎಲ್ಲಾದರೂ ಒಂದು ಕಡೆ ಫೈನಾಲಿಟಿಗೆ ಬರಬಾರದೆ ?80ರ ದಶಕದಲ್ಲಿ ರಿಸ್ಟ್ರಿಕ್ಷನ್, 90ರ ಈ ರಿಸ್ಟ್ರಿಕ್ಷನ್ಸನ್ನು ತೆಗೆದುಹಾಕುವುದು. 79ರಿಂದ 80ರ ದಶಕದಲ್ಲಿ ರಿಸ್ಟ್ರಿಕ್ಷನ್ಸ್, 90ರ ದಶಕದಲ್ಲಿ ರಿಲ್ಯಾಕ್ಸೇಷನ್ಸ್ ಈ ರಿಸ್ಟ್ರಿಕ್ಷನ್ಸ್ ಮತ್ತು ರಿಲ್ಯಾಕ್ಸೇಷನ್‌ಗೂ ಹಗಲು ರಾತ್ರಿಯಷ್ಟು ಸಂಬಂಧ. ಆ ಕಾರಣಕ್ಕೆ ನೋಟಿಫಿಕೇಷನ್ಸ್ ಬರುತ್ತದೆ. 5-9-79 ರಲ್ಲೊಂದು, 23-6-89 ರಲ್ಲೊಂದು .

ಶ್ರೀ ಕರಿಯಣ್ಣ:- ಅವರು ಹೇಳುತ್ತಲೇ ಇದ್ದಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ತಮ್ಮ ಮೂಲಕ ಅಪೀಲ್ ಮಾಡಿಕೊಳ್ಳುತ್ತೇನೆ. ಸರ್ವೋಚ್ಛ ಸಭೆಯಾಗಿರುವುದರಿಂದ . . . .

ಛೇರ್ಮನ್:- ಚಂದ್ರೇಗೌಡರೇ, ಒಂದು ನಿಮಿಷ. ತಮಗೆ ಈ ಜಾಗದಲ್ಲಿ ಕುಳಿತು ಅಪಾರವಾದ ಅನುಭವ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಅದನ್ನು ಹೇಳುತ್ತೇನೆ. ಬಹಳ ಅಂದರೆ ಇವತ್ತಿಗೆ 14 ದಿವಸ ಆಯಿತು. ಮಧ್ಯೆ ಬಂದಿರತಕ್ಕ ವಿಚಾರಗಳನ್ನು ಹೇಳಿದೆ. ಮೇಲಾಗಿ ಒಂದು ಜವಾಬ್ದಾರಿ ಸರ್ಕಾರ ಇದರ ಬಗ್ಗೆ ಜವಾಬ್ದಾರಿಯಿಂದ ಉತ್ತರ ಹೇಳುತ್ತದೆ, ಸರ್ಕಾರಕ್ಕಾಗುತ್ತಿರುವ ಆರ್ಥಿಕ ನಷ್ಟ . . . .

(ಗೊಂದಲ)

Mr.CHAIRMAN :- The concerned Minister says that he has replied in his reply.

ಶ್ರೀ ಎಂ.ಎಲ್.ಉಸ್ತಾದ್:- ಮಾನ್ಯ ಅಧ್ಯಕ್ಷರೇ, ನನ್ನ ಡಿಮಾಂಡ್‌ಗೆ ಉತ್ತರ ಕೊಡುವಾಗ ಇದರ ಬಗ್ಗೆ ಪ್ರಸ್ತಾಪ ಮಾಡಿ, ಎಷ್ಟು ಆದಾಯ ಬಂತು, ಎಷ್ಟು ಎಕ್ಸ್‌ಪೆಕ್ಟ್ ಮಾಡಿದ್ದೆವು, ಎಂದು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಹೈಕೋರ್ಟ್ ಜಡ್ಜ್‌ಮೆಂಟ್ ಬಗ್ಗೆಯೂ ಪ್ರಸ್ತಾಪ ಮಾಡಿದ್ದೇನೆ. ಆಗ ಅದರ ಬಗ್ಗೆ ಯಾರೂ ಸಹ ಪ್ರಶ್ನೆ ಕೇಳಲಿಲ್ಲ. ಆದರೆ ಇವರು ಪ್ರಸ್ತಾಪ ಮಾಡಿಲ್ಲ ಎಂದು ಹೇಳುತ್ತಿದ್ದಾರೆ, ಬೇಕಾದರೆ ರೆಕಾರ್ಡ್ಸ್ ನೋಡಿಕೊಳ್ಳಿ.

ಶ್ರೀ ಎಸ್.ಬಂಗಾರಪ್ಪ:-ಮೆರಿಟ್ಸ್ ಮೇಲೆ ಹೋಗುವುದಕ್ಕೆ ತಮಗೆ ನಿಯಮಗಳ ಪ್ರಕಾರ ಸಾಧ್ಯವೇ ಇಲ್ಲ. Till the consent is given by the Chair under the rules ಅದು ಬರುವ ಹಾಗಿಲ್ಲ. ನೀವೇ ಒಪ್ಪಿಕೊಂಡಿರುವ ಹಾಗೆ, ಆಲ್‌ರೈಟ್, 13ನೇ ತಾರೀಖು ಜಡ್ಜ್‌ಮೆಂಟಾಗಿದೆ, ರೀಸೆಂಟ್ ಅಕರೆನ್ಸ್ ಆಗಿದೆ ಎಂಬುದನ್ನು ನೀವು ಸ್ಯಾಟಿಸ್‌ಫೈ ಮಾಡಬೇಕು, ಅದನ್ನು ಮಾಡದೆ ಅವರಿಗಾಗಲಿ, ನಮಗಾಗಲಿ, ನಿಲುವಳಿ ಸೂಚನೆ ಮೂವ್ ಮಾಡಲು ಆಧಿಕಾರ ಬರುವುದಿಲ್ಲ. It is strictly under the rules. ಅವರು ಹೇಳುವ ಹಾಗೆ.,14,15ಹಾಲಿಡೇಸ್, 13 ಕ್ಕೆ ಜಡ್ಜ್‌ಮೆಂಟ್ ಆಗುತ್ತದೆ. ಅಡ್ವೋಕೇಟ್ ಜನರಲ್ ಅವರನ್ನು ಕಾಂಟ್ಯಾಕ್ಟ್ ಮಾಡುತ್ತಾರೆ. ಜಡ್ಜ್‌ಮೆಂಟ್ ಕಾಪಿ ಕಳುಹಿಸುವುದಿಲ್ಲ. ಯಾವ ರೂಲ್ಸ್ ಪ್ರಕಾರ ಇವರು ಜಡ್ಜ್‌ಮೆಂಟ್ ಕಾಪಿ ಕೇಳುತ್ತಾರೆ. ಯಾವ ರೂಲ್ಸ್ ಪ್ರಕಾರ ಅವರು ಕಳಿಸಿ ಕೊಡಬೇಕೋ ನನಗಂತೂ ಗೊತ್ತಿಲ್ಲ. ಏಕೆಂದರೆ I had also worked as leader of the opposition. ತಾವು ಹೇಳಿದ್ದೀರಿ, ಸರ್ಕಾರಕ್ಕೆ ಆಗಿನ ಕಾಲದಲ್ಲಿ ನಾನು ಪತ್ರ ಬರೆದೆ. ನಿಮಗೆ ಕೊಡುವುದಕ್ಕೆ ಯಾವ ಕಾನೂನೂ ಇಲ್ಲ ಎಂದು ನನಗೆ ರಿಪ್ಲೈ ಕೊಟ್ಟರು ಆಗ ತಮ್ಮ ಸರ್ಕಾರ ಅಂದರೆ ಹೆಗಡೆಯವರ ಸರ್ಕಾರ ಇತ್ತು. ಇದು ಪಬ್ಲಿಕ್ ಡಾಕ್ಯುಮೆಂಟ್ ಆಗುತ್ತದೆ. apply for a copy and get it. ಎಲ್ಲರೂ ಕಾಪಿ ತೆಗೆದುಕೊಳ್ಳಲು ಬರುತ್ತದೆ. ಈ ಸಂದರ್ಭದಲ್ಲಿ, ನೀವೇ ಪ್ರಯತ್ನಿಸಿ ಕಾಪಿ ತೆಗೆದುಕೊಂಡಿದ್ದೀರಿ, ಈ ಸದನಕ್ಕೆ ಡೇಟೇ ಕೊಟ್ಟಿದ್ದೀರಿ. You have obtained that on 18th. ಆಲೋಚನೆ ಮಾಡಿ ತೀರ್ಮಾನಿಸಲು ನನಗೆ ಸಮಯ ಬೇಕೆಂದು ನೀವು ಹೇಳಿದ್ದೀರಿ. ನಾನು ಕೇಳುತ್ತಿದ್ದೇನೆ. ರೂಲ್ 61 ರಲ್ಲಿ ಒಂದು ಸಲ ವಿಷಯ ಬಂದ ಮೇಲೆ ಅಲೋಚನೆ ಮಾಡಿ ತೀರ್ಮಾನ ಮಾಡುವುದಕ್ಕೆ ಕಾಲಾವಕಾಶ ಕೊಡಬೇಕೆಂದು ಯಾವ ರೂಲ್ಸ್ ಪ್ರಕಾರ ಇದೆ ? ನೀವೇ ಓದಿ ನೋಡಿ. ಹಾಗೇನಾದರೂ ಅದರಲ್ಲಿದೆ ಎಂದು ಹೇಳಿದರೆ ನೀವು ಟೈಮನ್ನು ತೆಗೆದುಕೊಳ್ಳಿ. That is Reasonable time. ಮತ್ತೊಂದು ಏನೆಂದರೆ One of the conditions. If it is there in Rule 61 ಹಾಗಿದ್ದರೆ Certainly you take. You have get right to take your own time if it is said in our rules. That is the question before us. ಆ ಗ್ರೌಂಡ್ ಅಲ್ಲದೇ ಇರತಕ್ಕಂಥದ್ದನ್ನು ತಾವು ಹೇಳುತ್ತಿದ್ದೀರಿ. 18ನೇ ತಾರೀಖು ಆದಮೇಲೆ 27ನೇ ತಾರೀಖು. ನೀವು ನೋಟೀಸನ್ನು ಕೊಟ್ಟಿರುವುದು 26ನೇ ತಾರೀಖು, ನಿನ್ನೆಯ ದಿವಸ. ನಿಮ್ಮ ಪ್ರಕಾರವೇ ಸುಮಾರು ಒಂದು ವಾರ ಕಾಲ ತಾವು ಏನು ಮಾಡುತ್ತಿದ್ದೀರಿ? ಆಲೋಚನೆ ಮಾಡುತ್ತಿದ್ದಿರಿ ಎಂದು ನಾನು ತಿಳಿದುಕೊಳ್ಳಬೇಕೆ. ಪರಿಶೀಲನೆ ಮಾಡುತ್ತಿದ್ದೀರಿ ಎಂದು ತಿಳಿಗುಕೊಳ್ಳಬೇಕೆ ನೀವು ಹಾಗೆ ಹೇಳಿರಬಹುದು. ಹಾಗೆ ಹೇಳುವ ರೂಲ್ ಎಲ್ಲಿ ಸ್ವಾಮಿ? ಯಾವ ರೂಲ್ ಪ್ರಕಾರ ಎಲ್ಲಿಯೂ ಕೂಡ ಅದು ಬರುವುದಿಲ್ಲ ಬರುವ ಹಾಗೆ ಇಲ್ಲ. ಅದು ನಂಬರ್1. ನಂಬರ್ 2,ಫೈನಾನ್ಸ್ ಮಿನಿಸ್ಟರ್ ರಿಪ್ಲೈ ಕೊಡಬೇಕು ಎಂದು ತಾವು ಹೇಳುತ್ತಿದ್ದೀರಿ ನಾನು ಹೇಳುತ್ತೇನೆ. ಇವತ್ತು ಡಿಮ್ಯಾಂಡ್ಸ್ ಎಂದರೆ ಏನು ಅರ್ಥ ಸ್ವಾಮಿ? ತಮಗೂ ಕೂಡ ಅನುಭವ ಇದೆ. ತಾವು ಕೂಡ ಸಚಿವರಾಗಿದ್ದಂಥವರು. The concerned Minister is the proper Minister to note down the points raised or anything referred to relating to his Demand. ಇವತ್ತು ಅವರು ರಿಪ್ಲೈ ಕೊಡತಕ್ಕಂಥ ಸಂದರ್ಭದಲ್ಲಿ ಕೆಲವು ಹೇಳಿರಬಹುದು, ಅಥವಾ

ಹೇಳದೆಯೂ ಇರಬಹುದು. ನನಗೆ ಗೊತ್ತಿಲ್ಲ. ಮಾನ್ಯ ಸಚಿವರು ಈಗ ಉತ್ತರ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. That matter has already been discussed here. ಇವತ್ತು ಒಂದು ಸಾರಿ ಡಿಸ್ಕಷನ್ ಆದಮೇಲೆ ಮತ್ತೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಿಯಮದಲ್ಲಿ ಏನಿದೆಯೆಂದು ನೋಡೋಣ. Under Rue 61 of our rules of procedure and conduct of Business,

"Not more than one matter shall be discussed on the same motion,"

"Not more than one such motion shall be made at the same sitting. Further, I quote:"

"The motion shall not revive discussion on a matter which has been discussed in the same session.

ಇದು ಸಬ್ ರೂಲ್ 5, ರೂಲ್ 61 ಇದರಲ್ಲಿ ಇದೆ.

This matter has already been discussed very recently. ಮಾನ್ಯ ಮಂತ್ರಿಗಳು ಡಿಮ್ಯಾಂಡ್ ಬಂದಿದ್ದು Just day before yesterday. ಸದನದಲ್ಲಿ ನಿನ್ನೆ ಅಲ್ಲ ಮೊನ್ನೆ ಈ ವಿಷಯ ಚರ್ಚೆಯಾಗಿದೆ, ಪ್ರಸ್ತಾಪಕ್ಕೆ ಬಂದಿದೆ. ಉತ್ತರ ಕೊಟ್ಟಿದ್ದು ಆಗಿದೆ. Even under sub-clause (V) of Rule 61 ಈ ಮ್ಯಾಟರ್ ತೆಗೆದು ಕೊಳ್ಳುವುದಕ್ಕೂ ಕೂಡ ಬರುವುದಿಲ್ಲ. ರೂಲ್ 3 ಬರುವುದಿಲ್ಲ, ರೂಲ್5 ಬರುವುದಿಲ್ಲ. ಆಮೇಲೆ ಮುಂದೆ ಏನಾಗಬಹುದು ಮತ್ತೊಂದು ವಿಚಾರ ಮಾಡುವುದಕ್ಕೂ ಇದರಲ್ಲಿ ಬರುವುದಿಲ್ಲ. Under sub-clause(2), I don't think that the Hon.Leader of the Opposition has got a right to have his say or seek consent to move the adjournment motion. ಈ ವಿಚಾರದಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, ಇದು ಟೆಕ್ನಿಕಲ್ ವಿಚಾರ. ತಾವು ಟೆಕ್ನಿಕಲ್ ವಿಚಾರ ಎಂದು ಹೇಳಿ ಮೆರಿಟ್‌ಗೆ ಹೋಗುತ್ತಿದ್ದೀರಿ. ಅದಕ್ಕೆ ಕರಿಯಣ್ಣನವರು ಮೆರಿಟ್‌ಗೆ ಹೋಗುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದು. Unless you get the permission, I don't think that you have got right or that right will accrue to have your say on the merits of the matter. ಆದರಮೇಲೂ ಕೂಡ ಈಗಾಗಲೇ ವಿಚಾರವನ್ನು ಹೇಳಿದ್ದಾಗಿದೆ. ಹೇಳಿದ ಮೇಲೂ ಏನು ಉಳಿದಿದೆ. ಸಂಬಂಧಪಟ್ಟಂಥ ಸಚಿವರು ಹೇಳಿದ ಮೇಲೆ ನಾನು ಹೇಳತಕ್ಕಂಥ ಪ್ರಶ್ನೆ ಬರುವುದಿಲ್ಲ. I as Finance Minister ಅದು ನನಗೆ ಬರುವುದಿಲ್ಲ ಏಕೆಂದರೆ, ನೀವು ಏತಕ್ಕೆ ಹೇಳಲಿಲ್ಲ ಎಂದರೆ Under what rule, you are demanding, I cannot understand. The concerned Minister has already made a statement on the subject matter.. That is discussed already. The voting on Demand for Grant has already taken place. Where is the question of special right for you or any other Member to raise this matter ? You please think over it.

SRI D.B.CHANDREGOWDA:- A matter of urgent public importance. I would like to draw your attention to page-450 of practice and procedure of Parliament which reads thus:

In interpreting, where a matter is urgent or not,
the speaker is guided by . . . .

ಛೇರ್ಮನ್:- ತಾವು ಒಂದು ನಿಮಿಷ ಕುಳಿತುಕೊಳ್ಳಿ.

Sri.D.A.CHINNAPPA:- Sir, I rise to a point of order.

Sri.A.B.JAKANUR:- He should give notice to the concerned Minister.

Sri.D.B.CHANDREGOWDA:- He is a senior Member of this House. There cannot be a point of order on a point of order. It is simple commonsense.

(ಗೊಂದಲ)

ಛೇರ್ಮನ್:- ಪಾಯಿಂಟ್ ಆಫ್ ಆರ್ಡರಿಗೆ ಅವರು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

Sri.D.B.CHANDREGOWDA:- A matter must be urgent. In Interpreting where..... ಈಗ ಪಾಯಿಂಟ್ ಆಫ್ ಆರ್ಡರನ್ನು ಸಭಾನಾಯಕರು ಎತ್ತಿದ್ದಾರೆ. ಅದು ಆದಮೇಲೆ ಮತ್ತೊಂದು ಪಾಯಿಂಟ್ ಆಫ್ ಆರ್ಡರನ್ನು ತೆಗೆಯಿರಿ.

ಛೇರ್ಮನ್:-ಜಕನೂರ್‌ರವರೆ ಸ್ವಲ್ಪ ನೀವು ಕುಳಿತುಕೊಳ್ಳಿ.

Sri.D.B.CHANDREGOWDA:- A matter must be urgent. In interpreting whether the matter is urgent or not, the Speaker is guided not by the ordinary meaning of the term but teachnical use of the term made in the rule.

Mr.CHAIRMAN:- You read the next sentence.

Sri. D.B.CHANDREGOWDA:- The ordinary meaning, I leave it to you. A matter must have in the nature of emergency. It must be of public importance.

Mr.CHAIRMAN:- You read the next sentence.
"A matter to be urgent must have been arisen suddenly in the nature of emergency" you please answer to that.

ಶ್ರೀ ಬಿ.ಹೆಚ್.ಬನ್ನಿಕೋಡ್:-ಸರ್ಕಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:-ನಾನು ಹಾಗೆ ಹಾಕಿದರ ಜಡ್ಜ್‌ಮೆಂಟ್ ಕಾಪಿ ತಂದಿದ್ದೀರಾ ಎಂದು ಕೇಳುತ್ತೀರಿ. ಆ ಕಾಪಿಯನ್ನು ತರುವುದಕ್ಕೆ ಪ್ರಯತ್ನ ಮಾಡಿದೆ ಅರ್ಜಿ ಹಾಕಿದೆ. ನನ್ನ ಕೈಗೆ ಸಿಕ್ಕಿದ್ದು 21ನೇ ತಾರೀಖು ಎಂದು ಹೇಳಿದ್ದೇನೆ. ಅಲ್ಲಿಂದ ಹೈಯೆಸ್ಟ್ ಪಾಸಿಬಿಲಿಟಿ ಎಂದು ಹೇಳಿದ್ದೇನೆ. ಇದಕ್ಕಿಂತ ತುರ್ತಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ತಾಂತ್ರಿಕವಾಗಿ ನಿಮಗೆ ಇದು ಸರಿಯೆಂದು ಕಂಡರೆ I have it to you. ನಿಮ್ಮ ತೀರ್ಪಿಗೆ ವಿರುದ್ಧವಾಗಿ ನಾನು ಹೋಗುವುದಿಲ್ಲ. But what is the urgency. ಇಲ್ಲಿ ಏನು ಅರ್ಜೆಂಟ್? ಅದು ಒಂದು ಪಬ್ಲಿಕ್ ಇಂಪಾರ್ಟೆಂಟ್ ದೃಷ್ಟಿಯಿಂದ ತಾವು ನೋಡಬೇಕು. ಈ ದೇಶದ ಪ್ರಕೃತಿ ದತ್ತವಾದಂಥ ಆಸ್ತಿ. ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು ಎನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ.

ಆ ಕೆಲಸ ಮಾಡುವುದಕ್ಕಾಗಿ ನಾವಿಲ್ಲಿದ್ದೇವೆ.

ಛೇರ್ಮನ್:-ಕಾನೂನಿನ ವ್ಯವಸ್ಥೆಯಲ್ಲಿ ತಾನೆ ಈ ಮನೆಯನ್ನು ನಡೆಸಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ:- ಕಾನೂನಿನ ವ್ಯವಸ್ಥೆಲ್ಲಿಯೇ ನಾವು ನಡೆಸುತ್ತಿದ್ದೇವೆ. ಆದ್ದರಿಂದ ಇಂತಹ ಸಾರ್ವಜನಿಕ ಅತ್ಯಂತ ಪ್ರಮುಖವಾದ ವಿಚಾರ ಏನಿದೆ
" An adjournment motion must raise a matter of sufficient public importance to warrant interruptions of ordinary business of the House.

ಛೇರ್ಮನ್:- ಈ ವಾಕ್ಯಕ್ಕೆ ನಿಮ್ಮ ಎಕ್ಸ್‌ಪ್ಲನೇಷನ್ ಬರಲಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ತಾವು ಟೆಕ್ನಿಕಲಿ ನೋಡುವುದಾದರೆ I leave it to you. You are the best judge. Does it not warrant the attention of this House? The judgement of this nature which do not indulge the Government but in one sentence says "Discretion" ಸಾರ್ವಜನಿಕ ಆಸ್ತಿಯನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಸರ್ಕಾರ ತನ್ನ ಡಿಸ್ಕ್ರಿಷನ್ ಅನ್ನು ಬೇಕಾಬಿಟ್ಟಿ ಬಳಸುವುದಕ್ಕೆ ಆಗುವುದಿಲ್ಲ. ಒಂದೇ ಮಾತನ್ನು ಹೇಳುತ್ತಾರೆ: "The law is now well settled that the matter of using discretion, the state has to act in fair and reasonable manner and not arbitrarily." ಆದ್ದರಿಂದ ಆರ್ಬಿಟ್ರರಿ ಆಗಿದೆ ಎನ್ನತಕ್ಕಂಥ ಇಂಪ್ರೆಷನ್ ಏನು ಕ್ರಿಯೇಟ್ ಮಾಡಿದ್ದೇವೆ ಅದನ್ನು ಚರ್ಚೆ ಮಾಡುವುದು ಬೇಡವೇ? ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ. . . .

ಛೇರ್ಮನ್:- ನಿಮಗೆ ಅವಕಾಶ ಇತ್ತು. 13 ರಿಂದ27 ರವರೆಗೆ ಅವಕಾಶ ಇತ್ತು, ಸಭೆ ನಡೆಯುತ್ತಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ:- ತಾಂತ್ರಿಕವಾದಂತಹ ತೊಂದರೆ ಇದೆ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ I would appeal to the chair to convert it in one form or the other or take it under rule 68 or for half an hour discussion. ನಿಲುವಳಿ ಸೂಚನೆಯಾಗುವುದಿಲ್ಲವೆಂದರೆ ಆಲ್‌ರೈಟ್. ತಾಂತ್ರಿಕವಾಗಿ ತಾವು ಒಪ್ಪಿಕೊಳ್ಳುವುದಾದರೆ Should the matter be discussed or not? If it has to be discussed, it should be important in the larger interest of the state, in the larger interest of the exchequer of the state, in the larger interest of the finances of the state and much more so in the interest of the legislature. I appeal to you to admit it in any form. I want a discussion on this. I leave it to you. Now, only you can convert the adjournment motion.

ಶ್ರೀ ಬಿ.ಹೆಚ್.ಬನ್ನಿಕೋಡ್:- ವಿಳಂಬದ ಪ್ರಶ್ನೆಯ ಮೇಲೆ ವಿಧಿ ಬಿಂದುವನ್ನು ಎತ್ತಿದ್ದಾರೆ. ಜಡ್ಜ್‌ಮೆಂಟ್ ಯಾವಾಗ ಆಯಿತು, ಅಲ್ಲಿಂದ ಎಷ್ಟು ವಿಳಂಬವಾಯಿತು. ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಲ್ಲಿಯೂ ಸಹ ತಾಂತ್ರಿಕ ಕಾರಣಗಳಿಂದಾಗಿ ಎಷ್ಟೋ ಸಾರಿ ಅದನ್ನು ರಿಜಕ್ಟ್ ಮಾಡುವುದಿಲ್ಲ. ಸಾರ್ವಜನಿಕ ಹಿತಾಸಕ್ತಿ .

ಛೇರ್ಮನ್:- ನೀವು ಅಡ್ವೋಕೇಟ್ ಸಾಹೇಬರಲ್ಲವೇ ?

ಶ್ರೀ ಬಿ.ಹೆಚ್.ಬನ್ನಿಕೊಡ್:- ಇದರಲ್ಲಿ ಯಾವುದೇ ವಿಳಂಬವಿಲ್ಲ. ಈ ನಿರ್ಣಯ ಬಂದ ಕೂಡಲೆ, ಜಡ್ಜ್‌ಮೆಂಟ್ ಆದ ಕೂಡಲೆ ಈ ಪರಿಸ್ಥಿತಿ ಉದ್ಭವವಾಗಿಲ್ಲ. ನಿರ್ಣಯ ಬಂದನಂತರ ಆ ನಿರ್ಣಯಕ್ಕೆ ಅನುಗುಣವಾಗಿ ಸರ್ಕಾರ ಮಾಡಬೇಕಾದ ಕರ್ತವ್ಯವನ್ನು ಮಾಡಲು ವಿಫಲವಾದ ನಂತರ ಅಂದರೆ, ಸರ್ಕಾರ

ಹೈಕೋರ್ಟಿನ ನಿರ್ಣಯದ ಪ್ರಕಾರ ಮಾಡಬೇಕಾದ ಕೆಲಸವನ್ನು ಮಾಡದೆ ಇರುವುದರಿಂದ ಅಂದಿನಿಂದ ಇಂದಿನವರೆಗೆ ಇಡೀ ರಾಜ್ಯಕ್ಕೆ, ಸರ್ಕಾರಕ್ಕೆ ಆದಂಥ ಅನ್ಯಾಯ, ಹಾನಿಯನ್ನು ಈ ಸದನದ ಮುಂದೆ ಚರ್ಚಿಸಬೇಕಾಗಿದೆ, ಆದಕ್ಕೆ ಸರ್ಕಾರ ಉತ್ತರ ಕೊಡಬೇಕಾಗಿದೆ. ಅದಕ್ಕಾಗಿ ಇದು ವಿಳಂಬವೆನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಹೆಚ್ಚಾಗಿ ಈ ರಾಜ್ಯಕ್ಕೆ ಅನ್ಯಾಯವಾಗಿದೆ. ಈ ರಾಜ್ಯದ ಕೋಟ್ಯಾಂತರ ರೂಪಾಯಿಗಳು ಹಾಳಾಗಿ ಹೋಗುತ್ತಿದೆ ಎನ್ನುವ ದೃಷ್ಟಿಯಿಂದ ಇದು ಅತ್ಯಂತ ಮಹತ್ವವಾದ ವಿಷಯವಾಗಿರುವುದರಿಂದ ವಿಳಂಬವಾಗಿಲ್ಲ. ಸರ್ಕಾರ ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದಕ್ಕೆ ವಿಫಲವಾಗಿದೆ ಎನ್ನುವುದನ್ನು ಚರ್ಚೆ ಮಾಡಬೇಕಾಗಿದೆ. ಅದೇ ಪರಿಸ್ಥಿತಿ ಉದ್ಭವವಾಗಿರತಕ್ಕಂಥಾದ್ದು. It is a recurring cause of action. ಇಲ್ಲಿಯವರೆವಿಗೂ ಮಾಡಿಲ್ಲ. ಅದನ್ನು ಮಾಡದೆ ಹೋದರೆ ಅಲ್ಲಿ ಲೈಸೆನ್ಸ್ ತೆಗೆದುಕೊಂಡಂಥವರು ಲೂಟಿ ಹೊಡೆಯುತ್ತಾರೆ, ಗ್ರಾನೈಟ್ ಒಯ್ಯುತ್ತಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

Mr.CHAIRMAN:- Don't go to merits. Convince the Chair to the point that there is no delay.

ಶ್ರೀ ಬಿ.ಹೆಚ್.ಬನ್ನಿಕೋಡ್:- ಜಡ್ಜ್‌ಮೆಂಟ್ ಆದನಂತರ ಇಲ್ಲಿಯವರೆಗೆ it is recurring cause of action. ಸರ್ಕಾರ ಅದನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ವಿಫಲವಾಗಿರುವುದರಿಂದ, ಅಲ್ಲಿ ಗ್ರಾನೈಟ್ ಕಲ್ಲುಗಳು ಇನ್ನೂ ಹೋಗುತ್ತಿರುವುದರಿಂದ ಲೈಸೆನ್ಸ್ ತೆಗೆದುಕೊಂಡಂಥವರು ಲೂಟಿ ಹೊಡೆಯುತ್ತಿದ್ದಾರೆ.

Mr. CHAIRMAN:- I don't allow you.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್:- ಕಾನೂನು ಬದ್ಧವಾಗಿದ್ದರೆ ವಿಷಯವನ್ನು ಚರ್ಚೆ ಮಾಡುವುದಕ್ಕೋಸ್ಕರ ತಾವು ಅವಕಾಶ ಮಾಡಿಕೊಡಿ.

ಛೇರ್ಮನ್:- ಆ ಇಲಾಖೆಯ ಬೇಡಿಕೆ ಬಂದಾಗ, ಅದಕ್ಕೆ ಮಂತ್ರಿಗಳು ರಿಪ್ಲೈ ಕೊಡತಕ್ಕಂಥ ಸಂದರ್ಭದಲ್ಲಿ ತಮ್ಮ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಸಭೆಯಲ್ಲಿ ಮಂಡಿಸಿರಿ.

ಶ್ರೀ ಡಿ.ಬಿ.ಚಂದ್ರೇಗೌಡ:- ನಮಗೆ ಅವಕಾಶ ಇದೆಯೋ ಇಲ್ಲವೋ ?

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್:- ವಿಳಂಬವಾಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಛೇರ್ಮನ್:-ನಾನು ಈಗ ಸಭಾ ನಾಯಕರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ. ಅವರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ನೀವು ಆ ಕಲ್ಲಿಗೆ ತಲೆ ಚಚ್ಚಿಕೊಳ್ಳಿ, ನಾವೇನು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್:- ಸರ್ಕಾರ ತನ್ನ ಕರ್ತವ್ಯವನ್ನು ಲೋಪ ಮಾಡುತ್ತಿರುವುದರಿಂದ ವಿಷಯವನ್ನು ಚರ್ಚಿಸಬೇಕಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:-ನಾನು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಆದ್ದರಿಂದ, ನಾನು ಮಾತನಾಡುತ್ತೇನೆ.

ಛೇರ್ಮನ್:- ನಾನು ಈಗ ಸಭಾ ನಾಯಕರನ್ನು ಕರೆದಿದ್ದೇನೆ. ಮೊದಲು ಅವರು ಮಾತನಾಡಲಿ.

ಶ್ರೀ ಎಸ್.ಬಂಗಾರಪ್ಪ:- ನಾನು ಮೆರಿಟ್ಸ್‌ಗೆ ಹೋಗತಕ್ಕಂಥ ಸಂದರ್ಭ ಅಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಈಗ ನಾವು ಟೆಕ್ನಿಕಲ್ ಆಧಾರದ ಮೇಲೆ, ಟೆಕ್ನಿಕ್ ಯಾರ್ಡ್ಸ್ ಮೇಲೆ ಈ ವಿಷಯದ ಚರ್ಚೆಯನ್ನು ಮುಚ್ಚಿಡಬೇಕೆನ್ನುವಂತ ಉದ್ದೇಶದಿಂದ ಸರ್ಕಾರದ ಪರವಾಗಿ ನಾನು ಮಾತನಾಡುವುದಿಲ್ಲ. ಈ ಸದನಕ್ಕೆ ಒಂದು ಅವಕಾಶ ಇದೆ. ಯಾವುದೇ ಸಂದರ್ಭದಲ್ಲಾದರೂ ಕೂಡ ಬಂದು ಜಡ್ಜ್‌ಮೆಂಟ್ ಆಗಲಿ, ಅಗದೆ ಇರಲಿ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಒಂದು ವಿಷಯ ಚರ್ಚೆಗೆ ಯಾವಾಗಲೂ ಒಳಪಡಬೇಕು. ನಾನು ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಿಲ್ಲ. ಆ ರೀತಿ ಚರ್ಚೆಗೆ ಒಳಪಡತಕ್ಕಂಥ ಸಂದರ್ಭ ಯಾವಾಗ ಬರುತ್ತದೆಂದರೆ,. ಆಯಾ ವಿಷಯ ಆಯಾ ಸಂದರ್ಭದಲ್ಲಿ ಬಂದಾಗ ಬರುತ್ತದೆ. ನಿನ್ನೆ ಅಥವಾ ಮೊನ್ನೆ ಈ ವಿಷಯದ ಡಿಮ್ಯಾಂಡ್ ಬಂದಾಗ ಚರ್ಚೆಗೆ ಆಗಲೇ ಒಳಪಟ್ಟಿದೆ. ಒಂದು ವೇಳೆ ಚರ್ಚೆಗೆ ಬರಲಿಲ್ಲ, ಡಿಮ್ಯಾಂಡ್ ಆಗಲಿಲ್ಲವೆಂದರೂ ಕೂಡ, ಅದು ಮುಂದೆ ಡಿಮ್ಯಾಂಡ್‌ಗೆ ಬರುವ ಸಂದರ್ಭ ಬಂದರೆ ಮತ್ತೂ ಕೂಡ ತಾವು ಅವಕಾಶ ಕೊಡುವುದಕ್ಕೆ ನಿಯಮದಡಿ ಬರುವುದಿಲ್ಲ. ಆದರೆ ಈ ವಿಷಯದ ಡಿಮ್ಯಾಂಡ್‌ನಲ್ಲಿ ಆಗಲೇ ಬಂದು ಚರ್ಚೆಯಾಗಿ ಅದಕ್ಕೆ ರಿಪ್ಲೈ ಕೊಟ್ಟಿದ್ದಾಗಿದೆ. ನಾನು ಮೆರಿಟ್ಸ್‌ಗೆ ಹೋಗುವುದಿಲ್ಲ. ಏಕೆಂದರೆ, ನಾನು ಪುನ: ಮೆರಿಟ್ಸ್‌ಗೆ ಹೋದರೆ, ಅವರು ಕೂಡ ಮತ್ತೆ ಮೆರಿಟ್ಸ್‌ಗೆ ಹೋಗಬೇಕಾಗುತ್ತದೆ. ಸರ್ಕಾರದ ಆದಾಯ ಸೋರಿಕೆಯ ವಿಚಾರದಲ್ಲಿ ಎಷ್ಟು ತಮಗೆ ಕಳಕಳಿ ಇದೆಯೋ ನಮಗೂ ಕೂಡ ಅಷ್ಟೇ ಕಳಕಳಿ ಇದೆ. ಅದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಆ ಜಜ್ಡ್‌ಮೆಂಟ್, ಮುಂದೆ ಅಪೀಲ್ ವಗ್ಗೆರೆ. ಡಿವಿಷನ್ ಬೆಂಚ್ ಮತ್ತೊಂದು ಹೋಗತಕ್ಕ ವಿಚಾರದಲ್ಲಿ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ all the things are being examined legally, on merits, ನಾವು ಆ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಿಂದೆ ಈ ವಿಚಾರ ಬಂದಾಗ ನಾವೇ ಸಮಿತಿಯನ್ನು ಮಾಡಲು ಒಪ್ಪಿಕೊಂಡಿದ್ದೇವೆ. ವಿರೋಧ ಪಕ್ಷದವರೂ ಇದ್ದಾರೆ. ನಾವು ಎಲ್ಲರೂ ಕೂಡ ಸೇರಿ ಅದನ್ನು ಮಾಡಿದ್ದೇವೆ. ನಾನು ಅದರ ಮೆರಿಟ್‌ಗೆ ಹೋಗುವುದಿಲ್ಲ. ಅದರ ಅರ್ಥವೇನೆಂದರೆ, ಆದಾಯದ ವಿಚಾರದಲ್ಲಿ ಅವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. ನಾನು ಅದರ ವಿವರಣೆಗೆ ಹೋಗುವುದಿಲ್ಲ. ಆದರೆ ಪುನ: ನಾನು ಒಂದು ಮಾತನ್ನು ಹೇಳಲೇ ಬೇಕಾಗಿದೆ. urgent ಎನ್ನತಕ್ಕ ವಿಚಾರದಲ್ಲಿ ನೋಡೋಣ. Kaul and Shakdhar ಪುಸ್ತಕದ 422ನೇ ಪೇಜಿನಲ್ಲಿ a matter is 'urgent' only if it is of very recent occurrence and must be raised at the first available opportunity. ಎಂದು ಇದೆ. ಸ್ವಾಮಿ ನಾನು ಅವರಿಗೆ ಕೇಳುತ್ತಿದ್ದೇನೆ. ಅವೇಲಬಲ್ ಆಪರ್ಚುನಿಟಿ ಜಡ್ಜ್‌ಮೆಂಟ್ ಆದ ಮೂರನೆಯ ದಿನವೋ ಅಥವಾ ಅದರ ಮಾರನೆಯ ದಿನವೋ ತೆಗೆದುಕೊಳ್ಳತಕ್ಕದನ್ನು ತೆಗೆದುಕೊಳ್ಳಬೇಕು. all right, admitedly ಜಡ್ಜ್‌ಮೆಂಟ್ ಬಂದಿರಲಿಲ್ಲವೆಂದರೂ ಕೂಡ admittedly by then copy is obtained by them on 18th, or 19th, 20th, 21st, 22nd or 23rd. ಮಧ್ಯೆ ಶನಿವಾರ, ಭಾನುವಾರ ಬಂದಿದೆ ಎಂದರೆ ಅಲ್ಲಿ ಎಲ್ಲಾ ದಿನಗಳೂ ಸಹ ಶನಿವಾರ, ಭಾನುವಾರವಾಯಿತೇ? ಉಳಿದಿರತಕ್ಕ ದಿನಗಳೇನಾಯಿತು? ಏಕೆಂದರೆ, ಸದನ ಸೇರಿದೆ, ಸದನದಲ್ಲಿ ಕಾರ್ಯಕಲಾಪಗಳು ನಡೆದಿವೆ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ. . . . . . .

ಛೇರ್ಮನ್:-ಬನ್ನಿಕೋಡ್‌ರವರೆ ನಾನು ನಿಮ್ಮನ್ನು ಮಾತನಾಡಲು ಕರೆಯಲಿಲ್ಲ. ಅವರನ್ನು ಮಾತನಾಡಲು ಕರೆದಿದ್ದೇನೆ.

ಶ್ರೀ ಎಸ್.ಬಂಗಾರಪ್ಪ:- ದಯಮಾಡಿ ಬನ್ನಿಕೋಡ್‌ರವರೆ ಕುಳಿತುಕೊಳ್ಳಿ. ಆಮೇಲೆ ಕೌಲ್ ಅಂಡ್

ಶಕ್ದರ್ ಪುಸ್ತಕದಲ್ಲಿ if it is of recent occurrence must be raised at the first available opportunity. ಎಂದು ಇದೆ. 'first available opportunity' ಎಲ್ಲ ಹೊರಟು ಹೋದವು. ಅನೇಕ ದಿನಗಳು ಉರುಳಿ, ಉರುಳಿ ಕಿತ್ತುಕೊಂಡು ಹೊರಟು ಹೋಗಿವೆ. ಆಗ ತಾವು ಮಾಡಲಿಲ್ಲ. ಆಮೇಲೆ matters arising during the period ....

ಶ್ರೀ ಡಿ.ಬಿ.ಚಂದ್ರೇಗೌಡ :- ತಾವು ತಪ್ಪು ಏನು ತಿಳಿಗುಕೊಂಡಿದ್ದೀರೆಂದರೆ, ಜಡ್ಜ್‌ಮೆಂಟ್ ಬಂದಮೇಲೆ ಆದಾಯಿತು ಎನ್ನುವುದು ನನ್ನ ಪ್ರಶ್ನೆಯಲ್ಲ. ಜಡ್ಜ್‌ಮೆಂಟ್ ಬಂದಾಯಿತು 18ನೇ ತಾರೀಖು ಆಯಿತು, ಡಿಲೇ ಆಯಿತು ಎಂದು ವಿವರಣೆ ಮಾಡಿದಿರಿ ಆ ಜಡ್ಜ್‌ಮೆಂಟ್ ಆದಮೇಲೂ ಕೂಡ ದಿನಗಳು ಹೋಗುತ್ತಿದೆ. That is the cause of action. ಇದನ್ನು ಬಿಟ್ಟು ನೀವು ಇನ್ನಾವುದನ್ನೊ ಹೇಳುತ್ತಿದ್ದೀರಿ.

ಶ್ರೀ ಎಸ್.ಬಂಗಾರಪ್ಪ:- ದಿನಗಳು ಹೋಗುತ್ತಿದೆ ಎನ್ನತಕ್ಕದ್ದು ಮೆರಿಟ್ ವಿಚಾರ.

ಶ್ರೀ ಡಿ.ಬಿ.ಚಂದ್ರೇಗೌಡ:-ಅದು ಮೆರಿಟ್ ವಿಚಾರವಲ್ಲ. ದಿನಗಳು ಹೋಗುತ್ತಿದೆ.

ಶ್ರೀ ಎಸ್.ಬಂಗಾರಪ್ಪ:-ಅದಕ್ಕೆ ಉತ್ತರವನ್ನು ಕೊಟ್ಟಾಗಿದೆ. ಆಗ ತಾವು ಇಲ್ಲಿ ಇರಲಿಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:-ಎಲ್ಲಿ ಉತ್ತರವನ್ನು ಕೊಟ್ಟಿದ್ದೀರಿ?

ಶ್ರೀ ಎಸ್.ಬಂಗಾರಪ್ಪ:-ಡಿಮ್ಯಾಂಡ್‌ನಲ್ಲಿ.

ಶ್ರೀ ಡಿ.ಬಿ.ಚಂದ್ರೇಗೌಡ:-ನಮಗೆ ಅದು ಗೊತ್ತಾಗಿದ್ದು ನಿನ್ನೆದಿನ.

ಶ್ರೀ ಎಸ್.ಬಂಗಾರಪ್ಪ:- ನೀವು ಆಗ ಇರಲಿಲ್ಲ. ನೀವು ಸದನದಲ್ಲಿ ಬಂದು ಕುಳಿತುಕೊಳ್ಳ ಬೇಕಾಗಿತ್ತು?

ಶ್ರೀ ಡಿ.ಬಿ. ಚಂದ್ರೇಗೌಡ:- ಸಮಯ ಹೋಗುತ್ತಿದೆ.

ಶ್ರೀ ಎಸ್.ಬಂಗಾರಪ್ಪ:- ನಿನ್ನೆಯೋ ಇವತ್ತೋ ಹೋಗುತ್ತಿರಬಹುದು. ಈ ವಿಚಾರ ಸದನದಲ್ಲಿ ಪ್ರಸ್ತಾಪವಾಗಿದೆ, ಉತ್ತರವನ್ನು ಕೊಟ್ಟಾಗಿದೆ.

(ಗೊಂದಲ)

Mr.CHAIRMAN:- I am not concerned with that. I want only whether you have filed this or demanding it within the reasonalbe time, at least within the reasonalbe time.

ಶ್ರೀ ಬಿ.ಹೆಚ್.ಬನ್ನಿಕೋಡ್:- ಅವರು ಹೈಕೋರ್ಟ್ ನಿರ್ಣಯವನ್ನು ವಯಲೇಟ್ ಮಾಡುತ್ತಿದ್ದಾರೆ. That is the cause of action. ಜಡ್ಜ್‌ಮೆಂಟ್ ಪ್ರಕಾರ ಸರ್ಕಾರ ನಡೆದುಕೊಂಡು ಬಂದಿಲ್ಲ. ಈಗಲೂ ಅಲ್ಲಿ ಕಲ್ಲು ಲೂಟಿಯಾಗುತ್ತಿದೆ.

Sri.S.BANGARAPPA:- Matters arising during the period when the House is not in session should be raised on the first day the House meets. ಇದು ಸದನದಲ್ಲಿ ನಡೆಯುತ್ತಿರುವಾಗ ಬಂದಿರತಕ್ಕದ್ದು. ಇದಕ್ಕಿಂತ ಉತ್ತಮವಾದ ಹೈಕ್ಲಾಸ್ ಅವಕಾಶ ನಿಮಗೆ ಯಾವಾಗಲೂ ಸಿಕ್ಕಿರಲಿಲ್ಲ. ಆದರೆ ಅದನ್ನು ನೀವು ಉಪಯೋಗ ಮಾಡಿಕೊಳ್ಳಲಿಲ್ಲ. a matter which has been continuing for sometime cannot be raised through an adjournment motion. A matter if it is of very recent occurrence is not urgent if an opportunity for its discussion will arise in the ordinary course of business within a reasonalbe short time. ಇದು

ಯಾವಾಗ ಬಂತು ? ಇದು urgent ಆಗುವುದಿಲ್ಲ. ಏಕೆಂದರೆ ಸದನದಲ್ಲಿ ಡಿಮ್ಯಾಂಡ್ ಚರ್ಚೆಗೆ ಬಂದಿದೆ. In the discussion relating to the demand of the hon'ble Minister the hon'ble members have already participated in the discussion. They have tried to throw light on the subject and hon'ble Minister on behalf of the Government has replied. That means the matter was already under discussion. He has already replied. The matter is over. ನಿಮಗೆ ಇದರ ಬಗ್ಗೆ ಎಷ್ಟು ಸಂಬಂಧವಿದೆಯೋ ನಮಗೂ ಕೂಡ ಅಷ್ಟೇ ಕನ್‌ಸರ್ನ್ ಇದೆ ಎನ್ನತಕ್ಕ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳಿಯಾಗಿಬಿಟ್ಟಿದೆ. ಇವತ್ತು ನೀವು ಬಂದು, ನಿನ್ನೆ ನೋಟೀಸ್ ಕೊಟ್ಟು ಇದರ ಬಗ್ಗೆ ನೀವು ಹೇಳಿದಾಗಲೆ ಅರ್ಜೆಂಟ್ ಆಗುತ್ತದೆಯೇ? ನೀವು ಹೇಳಿದಾಗಲೆ ಕನ್‌ಸರ್ನ್ ಬರುತ್ತೀರಿ, ಬೇರೆಯವರು ಕನ್‌ಸರ್ನ್ ಇಲ್ಲವೇ ? ಆದರ ಬಗ್ಗೆ ನಮಗೂ ಕೂಡ ಈಕ್ವಲಿ ಕನ್‌ಸರ್ನ್ ಇದೆ. ನಾವು ಕೂಡ ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಬೇಕೊ ಆ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಆ ವಿಚಾರವನ್ನು ಹೇಳುವಂತಹ ಅವಶ್ಯಕತೆ ಇಲ್ಲ. ಏಕೆಂದರೆ, ಅದನ್ನು ಮೊದಲೇ ಹೇಳಿದ್ದಾಗಿದೆ. ನಾವು ಹೇಳಿದಾಗ ನೀವು ಇರಲಿಲ್ಲ. The matter is already discussed and we have already replied. ಕೊನೆಯಲ್ಲಿ ನೀವು ಈಗ ಬಂದು ಈ ವಿಚಾರವನ್ನು ಎತ್ತಿದ್ದೀರಿ, ಎತ್ತಿದ ತಕ್ಷಣವೇ ಅರ್ಜೆಂಟ್, ಇಲ್ಲದಿದ್ದರೆ ಏನೂ ಆಗುವುದಿಲ್ಲ. ಕಲ್ಲು ಹೋಗುತ್ತಿರುವುದು ನಿಮಗೊಬ್ಬರಿಗೇ ಗೊತ್ತಿರುವುದಿಲ್ಲ, ನಮಗೂ ಕೂಡ ಗೊತ್ತಿದೆ. ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇವೆ.

Sri.B.H.BANNIKOD :- Sir, ...

(ಗೊಂದಲ)

ಶ್ರೀ ಎಸ್.ಬಂಗಾರಪ್ಪ:- ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳಿ ಕೊಳ್ಳುತ್ತಿದ್ದೇನೆ. ತಮಗೆ ಸಿಕ್ಕಿದ ಆಪರ್ಚುನಿಟಿಯನ್ನು ತಾವು ಸದುಪಯೋಗಪಡಿಸಿಕೊಳ್ಳತಕ್ಕಂಥ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರ ಅನುಮತಿಯನ್ನು ಪಡೆಯುವುದಕ್ಕಾಗಿ, ಈ ನಿರ್ಣಯವನ್ನು ಮಂಡನೆ ಮಾಡುವುದಕ್ಕಾಗಿ ಪೂರ್ಣ ಅನುಮತಿ ಪಡೆಯುವುದಕ್ಕೋಸ್ಕರ I don't think you have made out any case. I think you have lost the opportunity even to participate in the discussion. You have lost the opportunity even to file the notice of adjournment motion and move the adjournment motion. ಅದು ಬರುವುದಿಲ್ಲ. ಇದು ಟೆಕ್ನಿಕಲ್ ಪಾಯಿಂಟ್ ಮೇಲೆ ಬರುವುದಿಲ್ಲ. ಯಾವುದಕ್ಕೂ ಬರುವುದಿಲ್ಲ. ಇದನ್ನು ಮುಚ್ಚಬೇಕು ಎನ್ನುವ ದೃಷ್ಟಿಯಿಂದ ನಾವು ಮಾಡಿಲ್ಲ. ಈಗಾಗಲೇ ಚರ್ಚೆಯಾಗಿ ರಿಪ್ಲೈಕೊಟ್ಟು ಮುಗಿದುಹೋಗಿರುವುದರಿಂದ, ನೀವು ಬಂದು ರೈಸ್ ಮಾಡಿದ ತಕ್ಷಣ ನಾನು ಇಲ್ಲಿ ನಿಮ್ಮ ಒಬ್ಬರ ಬಗ್ಗೆ ಹೇಳುತ್ತಿಲ್ಲ. ಇವತ್ತು ನಿಮಗೆ ಹಕ್ಕು ಬಂದರೆ ನಾಳೆ ಮತ್ತೊಬ್ಬರಿಗೆ ಹಕ್ಕು ಬರುತ್ತದೆ. ಆದ್ದರಿಂದ ನೀವು ಅದೇ ವಿಚಾರವನ್ನು ಮಾಡುವುದಕ್ಕೆ ಯಾವುದೇ ಅವಕಾಶವಿಲ್ಲ. ಯಾವ ರೂಲ್ ಪ್ರಕಾರವೂ ಬರುವುದಿಲ್ಲ. The matter is a colsed matter technically and even otherwise ಇದು ಮುಗಿದಿರತಕ್ಕಂತಹ ವಿಚಾರ. ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ತಾವು ಪ್ರೆಸ್ ಮಾಡಬಾರದು. ಈ ವಿಚಾರವನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ತಾವು ಪ್ರೆಸ್ ಮಾಡಿದರೆ ಕನ್‌ಸೆಂಟ್ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು

ಇಲ್ಲಿ . . . .

ಛೇರ್ಮನ್:-ನಾನು ನಿಮ್ಮನ್ನು ಕರೆದಿಲ್ಲ. ಅವರು ಒಬ್ಬರೇ ಸೈನ್ ಮಾಡಿ ಕಳುಹಿಸಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಸೈನ್ ಮಾಡುವುದಿಲ್ಲ, ಈಗ ಅಡ್‌ಜರ್ನ್‌ಮೆಂಟ್ ಮೋಷನ್‌ನ್ನು ನೀವು ತೆಗೆದುಕೊಳ್ಳುವ ಅವಕಾಶ ಇದೆಯೆಂದು ಹೇಳುತ್ತೇನೆ, ನಾನು ವಿಷಯಕ್ಕೆ ಹೋಗುತ್ತಿಲ್ಲ, ಚರ್ಚೆಗೆ ಹೋಗುತ್ತಾ ಇಲ್ಲ.

ಛೇರ್ಮನ್:- ಚರ್ಚೆಗೆ ಬರುವುದಿಲ್ಲ, ಬೇರೆ ವಿಷಯ ಗಮನಕ್ಕೆ ತನ್ನಿ. ಅವರು ಆದಮೇಲೆ ಬೇರೆಯವರು ಮಾತನಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಕಾನೂನಿನ ಚೌಕಟ್ಟಿನಲ್ಲಿ ಇದು ಬರುತ್ತದೆಂದು ಹೇಳುತ್ತಿದ್ದೇವೆ ಅಷ್ಟೇ, ನಾನು ಅದರ ಬಗ್ಗೆ ಸಬ್‌ಜೆಕ್ಟ್‌ಗೆ ಹೋಗುತ್ತಿಲ್ಲ. ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಸನ್ಮಾನ್ಯ ಅಧ್ಯಕ್ಷರೇ . . .

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಸಬ್‌ಜೆಕ್ಟ್‌ಗೆ ಹೋಗುತ್ತಿಲ್ಲ, ಅಡ್‌ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ ಬರುತ್ತದೆಯೆಂದು ಹೇಳುತ್ತಿದ್ದೇನೆ.

ಛೇರ್ಮನ್:- ನನಗೆ ಅದು ಬೇಕಾಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಹಾಗೆಂದು ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ನಾನು ನಿಮಗೆ ಮನದಟ್ಟು ಮಾಡುವುದಕ್ಕೆ ಹೇಳಿದೆ. ನಾನು ಸಬ್‌ಜೆಕ್ಟ್ ಹೇಳಲಿಲ್ಲ.

(ಗೊಂದಲ)

ಛೇರ್ಮನ್:-ಮಾನ್ಯ ಯಡಿಯೂರಪ್ಪನವರು ಹೇಳುವುದು ರಿಕಾರ್ಡ್‌ಗೆ ಹೋಗುವುದು ಬೇಡ.

ಒಬ್ಬ ಮಾನ್ಯ ಸದಸ್ಯರು:-ಮಾನ್ಯ ಅಧ್ಯಕ್ಷರೇ, ಕಾನೂನು ಪ್ರಕಾರ ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಸಭಾನಾಯಕರು ಒಟ್ಟು ನನ್ನ ಮೋಷನ್ ಇದೆಯಲ್ಲಾ ಅದನ್ನೇ ತಪ್ಪು ದಾರಿಗೆ ಎಳೆದುಕೊಂಡು ಹೊರಟು ಹೋದರು. ಅದಕ್ಕೆ ನಾನು ಸುಮ್ಮನೆ ಕುಳಿತುಕೊಂಡೆ.

ಛೇರ್ಮನ್:-ನಿಮ್ಮನ್ನು ಎಳೆದುಕೊಂಡು ಹೋಗಿದ್ದಾರೆಯೇ, ನಿಮ್ಮನ್ನು ಎಳೆದುಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ.

Sri.D.B.CHANDREGOWDA:- My point was this ನನ್ನ ಉದ್ದೇಶ ಏನು ಇದೆಯೆಂದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಮೇಲೂ ಕೂಡ ವ್ಯವಹಾರ ನಿಂತಿಲ್ಲ.

ಛೇರ್ಮನ್:- ಅದರ ಬಗ್ಗೆ ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವತ್ತು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿರುವ ಬಗ್ಗೆ, ಅದರಲ್ಲಿ ಅವಕಾಶ ಇದೆ, ನೀವು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ, ನನಗೆ ಮಾತನಾಡುವುದಕ್ಕೆ ಹಕ್ಕಿಲ್ಲ ಎಂದು ಹೇಳಿದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನಾನು ಸಬ್‌ಜೆಕ್ಟ್‌ಗೆ ಹೋಗುತ್ತಾ ಇಲ್ಲ.

ಛೇರ್ಮನ್:- ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ, ಈಗ ಲಾ ಮಿನಿಷ್ಟರು ಏನು ಹೇಳುತ್ತಾರೊ ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಕೊಡುವುದಕ್ಕೆ ಮುಂಚೆ ನಾವು ಗ್ರಾನೈಟ್ ಕಲ್ಲಿನ ವ್ಯವಹಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಪ್ರಶ್ನೆ ಏನೆಂದರೆ ಹೈಕೋರ್ಟ್ ಇದನ್ನು ರದ್ದು ಮಾಡಿದ ಮೇಲೂ ಸಹ ಕಲ್ಲು ಕಳ್ಳಸಾಗಾಣಿಕೆ ಆಗುತ್ತಿದೆ, ಅದು ನಿಂತಿಲ್ಲ.

(ಗೊಂದಲ)

Mr.CHAIRMAN:- Is it a Point of Order ? It is not a Point of Order.

ಶ್ರೀ ಬಿ.ಎಸ್.ಯಾಡಿಯೂರಪ್ಪ:- ಹಾಗಲ್ಲ ಮಾನ್ಯ ಅಧ್ಯಕ್ಷರೆ, ಇವರು ಸುಪ್ರೀಮ್ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಿಕ್ಕೆ ಹೊರಟಿದ್ದಾರೆ. ಇವತ್ತು ಈ ಹೌಸ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಶ್ಯೂರೆನ್ಸ್ ಕೊಡಬೇಕು. ನಾವು ಸುಪ್ರೀಮ್ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದಿಲ್ಲ ಎಂದು ಅವರು ಈ ಹೌಸ್‌ನಲ್ಲಿ ಹೇಳಬೇಕಾಗುತ್ತದೆ.

(ಗೊಂದಲ)

ಛೇರ್‌ಮೆನ್:-ಹೇಗೆ ಕೊಡುವುದಕ್ಕೆ ಸಾಧ್ಯ, ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಿದ್ದಾರೆ, ಅದನ್ನು ಕೇಳುವುದು ಬೇಡವೇ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವತ್ತು ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಒಂದು ಹಣಕಾಸಿನ ವಿಷಯ ಇದು. ತಾವು ಅಡ್ಜರ್ನಮೆಂಟ್ ಮೋಷನ್ ಮೂಲಕ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎಂದ ತಳ್ಳಿ ಹಾಕಿದರೆ ನನ್ನದೇನು ಅಭ್ಯಂತರ ಇಲ್ಲ. ನಾನು ನಿಮ್ಮನ್ನು ಏನು ಕನ್‌ವಿನ್ಸ್ ಮಾಡುವುದಕ್ಕೆ ಹೊರಟಿದ್ದೇನೆ ಅಂದರೆ, ಸನ್ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೂ ಸಹ, ಲೈಸೆನ್ಸ್ ರದ್ದು ಆಗಿರುವಂಥ ಅದೇ ಕಂಟ್ರಾಕ್ಟ್‌ದಾರರು ಕಲ್ಲನ್ನು ಸಾಗಾಣಿಕೆ ಮಾಡುತ್ತಿದ್ದಾರೆ.

ಛೇರ್ಮನ್:- ಇದು ಯಾವುದರ ಪಾಯಿಂಟ್ ಆಫ್ ಆರ್ಡರ್ No. This is not a point of order.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೈ ಕೋರ್ಟ್ ರದ್ದು ಮಾಡಿದ ಮೇಲೂ, ಆ ಕಂಟ್ರಾಕ್ಟದಾರರು ಈ ಕಲ್ಲನ್ನು ಸಾಗಾಣಿಕೆ ಮಾಡುತ್ತಿದ್ದಾರೆ.

ಛೇರ್ಮನ್:-ಅವರು ಎಲ್ಲಾ ಹೇಳಿದ್ದಾರೆ, ಪುನ: ಇದನ್ನೆ ಹೇಳುತ್ತಿದ್ದೀರಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಮತ್ತೆ ಸರ್ಕಾರ ಇವರ ಬೆಂಬಲಕ್ಕೋಸ್ಕರ ಸುಪ್ರೀಮ್ ಕೋರ್ಟಿಗೆ ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಹೊರಟಿದೆ. ಅದನ್ನು ಕೈಬಿಡುತ್ತೇವೆ ಎನ್ನುವ ಅಷ್ಯೂರೆನ್ಸ್ ಕೊಡಬೇಕಾಗುತ್ತದೆ. ಇದು ಅತ್ಯಂತ ಪ್ರಮುಖವಾಗಿರುವ ವಿಷಯ. ಆದ್ದರಿಂದ ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಅಂದರೆ18-06-1991 ರಂದು ರಾಜ್ಯ ಸರ್ಕಾರದವರು ಸುಮಾರು 177 ಜನ ಗ್ರಾನೈಟ್ ಉದ್ದಿಮೆದಾರರಿಗೆ ಕರ್ನಾಟಕ ಮೈನರ್ ಮಿನರಲ್ ಆಕ್ಟ್ ಆಫ್ 1969 ರೂಲ್ ನಂಬರ್ (3) ಪ್ರಕಾರ ಅನುಮತಿಯನ್ನು ಕೊಟ್ಟಿದ್ದಾರೆ. ದಿನಾಂಕ 13-03-1992 ರಂದು ನಮ್ಮ ರಾಜ್ಯದ ಹೈಕೋರ್ಟ್ ಈ ರೂಲ್ ನಂಬರ್ (3) ರಲ್ಲಿ ಅನುಮತಿ ಕೊಟ್ಟಿದ್ದು ಅಕ್ರಮ

ಮತ್ತು ಕಾನೂನು ಬಾಹಿರ, ರಾಜ್ಯಸರ್ಕಾರ ಕಾನೂನು ಬಾಹಿರವಾಗಿ . . . .

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- Writ Petitions 14,783 ಮತ್ತು 14,241ರಲ್ಲಿ ನ್ಯಾಯ ಮೂರ್ತಿಗಳು ಹೇಳಿದ್ದಾರೆ. ಇದರ ಕಾಪಿ ನಮಗೆ ನಿನ್ನೆ ಸಿಕ್ಕಿತು.

ಶ್ರೀ ಬ್ಲೇಸಿಯಸ್.ಎಂ.ಡಿಸೋಜ:- ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರಿಗೆ ನೀವು ಸರಿಯಾಗಿ ಹೇಳಿದ್ದೀರಿ, ಅವರು ಕುಳಿತುಕೊಂಡಿದ್ದಾರೆ. ಇವರು ಸುಮ್ಮನೆ ಪುನ: ಅದನ್ನೇ ಹೇಳುತ್ತಿದ್ದಾರೆ. He is going into the merits of the case.

ಛೇರ್ಮನ್:- ಅವರು ನಿಲುವಳಿ ಸೂಚನೆ ಕೊಟ್ಟಿದ್ದಾರೆ, ಎರಡು ಮಾತಾಡಲಿ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ:-ಈಗ ನಿಲುವಳಿ ಸೂಚನೆ ಕಳಿಸಿದ ಮೇಲೆ ಮೆರಿಟ್ ಆಫ್ ದಿ ಕೇಸ್ ಡಿಸ್‌ಕಷನ್ ಮಾಡಿದ್ದರೆ ಹೇಗಾಗುತ್ತದೆ.

ಛೇರ್ಮನ್:- ನೀವು ಮೆರಿಟ್ ಆಫ್ ದಿ ಕೇಸ್ ಡಿಸ್‌ಕಷನ್ ಮಾಡುವ ಹಾಗಿಲ್ಲ.

(ಗೊಂದಲ)

ಛೇರ್ಮನ್:- ರಾಯರೆಡ್ಡಿಯವರೆ, You have to convince the Chair about the urgency and the delay. Why there is delay and the urgency of the matter. ಇವೆರಡನ್ನು ಕೇಳಿ ಸಾಕು.

ಶ್ರೀ ಬಸವರಾಜ ರಾಯರೆಡ್ಡಿ:-ಅದೇ ಮಾಡುತ್ತೇನೆ. ತಾವು ಏನು ಹೇಳಿದ್ದೀರಿ ಅದರ ಬಗ್ಗೆ ನಾನು ಚರ್ಚೆ ಮಾಡುತ್ತೇನೆ.

ಛೇರ್ಮನ್:- 13ನೇ ತಾರೀಖು ಜಡ್ಜ್‌ಮೆಂಟ್ ಬಂದಿದೆ, 27ನೇ ತಾರೀಖು ಮೂವ್ ಮಾಡಿದ್ದೀರಿ. ಆ ಡಿಲೆ ಎಕ್ಸ್‌ಪ್ಲೈನ್ ಮಾಡಿ ಅರ್ಜೆನ್ಸಿ ಏನಿದೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:- ಅದನ್ನೆ ಮಾತನಾಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ:- ನಾವು ಮತ್ತೆ ಮತ್ತೆ ಗಮನಕ್ಕೆ ತರುತ್ತಿದ್ದೇವೆ, There cannot be an adjournment Motion on the judgement of the High Court. That is the reason. Why my notice is consequent upon the judgement.

ಛೇರ್ಮನ್ :- ತಾವು ಬರೆದಿರುವುದು ಓದಲೇ ?

ಶ್ರೀ ಡಿ.ಬಿ.ಚಂದ್ರೇಗೌಡ :- ತಾವು ಓದಿ.

ಛೇರ್ಮನ್:- ಉಚ್ಚನ್ಯಾಯಾಲಯದಲ್ಲಿ ಗ್ರಾನೈಟ್ ವ್ಯವಹಾರದ ಬಗ್ಗೆ ತೀರ್ಪು ನೀಡಿದ ವಿಚಾರ ಎಂದು ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ:-ತೀರ್ಪು ನೀಡಿದ ವಿಚಾರ, ಅದರ ಮೇಲೆ ಆಗಿರತಕ್ಕಂಥದ್ದು ಏನು ಅನ್ನುವುದು ಬೇಡವೆ. ಆ ತೀರ್ಪಿಗೆ ಮರ್ಯಾದೆ ಬಂದಿದೆಯೇ ? That is the question. If that decision has no meaning in the eye of the Government, What should I do?

ಛೇರ್ಮನ್:-ಸಭಾನಾಯಕರು ಸುಪ್ರೀಂಕೋರ್ಟಿಗೆ ಹೋಗುತ್ತೇವೆಂದು ಹೇಳಿದ್ದಾರೆ. ಡಿವಿಜನ್ ಹಾಕುತ್ತೇವೆಂದು ಹೇಳಿದ್ದಾರೆ.

(ಗೊಂದಲ)

Sri. D.B.CHANDREGOWDA:- I know that there cannot be an Adjournment Motion on the Judgement of the Court. I know that

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಕೇಳಿದ್ದೇನೆ. ಯಾವ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ, ಎಂದು ನೋಡಿದ್ದೇನೆ. ಇವರು ಜಡ್ಜ್ಮೆಂಟ್ ವಿಚಾರ ಕೊಟ್ಟಿದ್ದಾರೆ. " Absolutely on the Judgment" ಬೇರೆ ಯಾವ ವಿಚಾರವನ್ನೂ ಹೇಳಿಲ್ಲ. There is no question of "consequent" ಉಚ್ಚ ನ್ಯಾಯಾಲಯ ಗ್ರಾನೈಟ್ ವ್ಯವಹಾರದ ಬಗ್ಗೆ ತೀರ್ಪು ನೀಡಿದ ವಿಚಾರ. Only on that. . . .

(Interruptions)

ಶ್ರೀ ಎಂ.ವೀರಪ್ಪ ಮೊಯಿಲಿ:- ಇದು ತಾಂತ್ರಿಕ ಕಾರಣವಲ್ಲ. ಇದರಲ್ಲಿ . . .

(ಗೊಂದಲ)

ಛೇರ್ಮನ್:- ನಾನು ಮಾನ್ಯ ವೀರಪ್ಪ ಮೊಯಿಲಿಯವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಎಂ.ವೀರಪ್ಪಮೊಯಿಲಿ:-ಸನ್ಮಾನ್ಯ ಅಧ್ಯಕ್ಷರೆ; ಐ ಆಮ್ ಆನ್ ಮೈ ಲೆಗ್ಸ್. ಈ ಪ್ರಶ್ನೆ ಕೇವಲ ತಾಂತ್ರಿಕ ಅಲ್ಲ. ತಾಂತ್ರಿಕವಾದಂಥ ಪ್ರಶ್ನೆ ಅಥವಾ ಸಾಮಾನ್ಯವಾದಂಥ ಪ್ರಶ್ನೆ ಯಾಗಿದ್ದರೆ ಅದನ್ನು ನಾವು ಓವರ್‌ಲುಕ್ ಮಾಡಬೇಕು. ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಆದರೆ ಇಲ್ಲಿ ಏನು ಪ್ರಶ್ನೆ ಬಂದಿದೆಯೆಂದರೆ, ಒಂದು ತೀರ್ಪು ಇದೆ. ಆ ತೀರ್ಪನ್ನು ನಾವು ಇಟ್ಟುಕೊಂಡು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ, ಇದು ಎಲ್ಲಿ ನಿಲ್ಲುತ್ತದೆ, ತೀರ್ಪಿನ ಪರವಾಗಿ ಮಾತವಾಡುವುದಕ್ಕಾಗುತ್ತದೆಯೆ ? ಅಥವಾ ತೀರ್ಪಿನ ವಿರುದ್ಧವಾಗಿ ಮಾತನಾಡುವುದಕ್ಕಾಗುತ್ತದೆಯೆ? ಇವರು ಡಿವಿಜನ್ ಬೆಂಚ್‌ಗೆ ಅಪೀಲು ಮಾಡಬೇಕು ಅಷ್ಟೆ. After all, the Single Bench has given the Judgement. It is open for the aggrieved parties to go in for Appeal. ಈ ಪರಿಸ್ಥಿತಿ ಇರುವಾಗ ನಾವು ಇಲ್ಲಿ ಮಾತನಾಡಿಕೊಂಡು, ಅಲ್ಲಿ ಕೆಂಪು ಕಟ್ಟಡದಲ್ಲಿ ಮಾಡಬೇಕಾದ ಕೆಲಸವನ್ನು ಇಲ್ಲಿ ಮಾಡಿ ಇದರ ಸಮಾಧಿ ಮಾಡಿದರೆ ಈ ವಿಷಯದ ಬಗ್ಗೆ ಸರಿಯಾದ ತೀರ್ಮಾನವನ್ನು ಕೋರ್ಟಿನವರು ತೆಗೆದುಕೊಳ್ಳುವುದಕ್ಕೂ ಕೂಡ We are trying to tic down their hands. It is a very dangerous proposition. I don't think, in the annals of history, we have allowed a discussion on the judgement. I don't think it is permissible. It has got to be dismissed inlimine.

(ಗೊಂದಲ)

ಛೇರ್ಮನ್:-ನೀವು ಕುಳಿತುಕೊಳ್ಳಿ.

Sri.M.VEERAPPA MOILY:- You cannot discuss a judgment.......

Sri D.B.CHANDREGOWDA :- I have just a Point of Order. Before he goes. . ಛೇರ್ಮನ್:-ಮೊದಲು ಅವರು ಪೂರೈಸಲಿ.

ಶ್ರೀ ಡಿ.ಬಿ.ಚಂದ್ರೇಗೌಡ:- ನನ್ನ ನೋಟೀಸನ್ನು ಈ ಸದನದಲ್ಲಿ ತಪ್ಪಾಗಿ ಓದತಕ್ಕ ಪ್ರಯತ್ನವನ್ನು ಮಾನ್ಯ ಸಂಸದೀಯ ಮಂತ್ರಿಗಳು ಮಾಡಬಾರದು.

ಶ್ರೀ ಎಂ.ವೀರಪ್ಪ ಮೊಯಿಲಿ:- ತಪ್ಪು ಅಲ್ಲ ಎರಡೂ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ಏನು ಹೇಳಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:-ಏನು ಉದ್ಭವವಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ರಾಜ್ಯದಲ್ಲಿ ಕಲ್ಲುಗಣಿ ಗುತ್ತಿಗೆ ವಿಚಾರದಲ್ಲಿ ರಾಜ್ಯದ ಹೈ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿ ಎಂದು ಇದೆ. ಉದ್ಭವಿಸಿರಲಿ ಪರಿಸ್ಥಿತಿ ಏನೆಂದರೆ, the High Court Order has been violated by the Administrator of this Government.

Dr: Y.NAGAPPA:- Where is the documentary evidence? When you don't have evidence, you don't have the right to mislead the House.

ಶ್ರೀ ಡಿ.ಬಿ.ಚಂದ್ರೇಗೌಡ:-ದಿನಬಳಕೆಯ ಕಲ್ಲೂ ಹೋಗುತ್ತಿದೆ. ಇದು ಎವಿಡೆನ್ಸ್ . . . .

(ಗೊಂದಲ)

ಛೇರ್ಮನ್:- ಈಗ ಮಾನ್ಯ ವೀರಪ್ಪಮೊಯ್ಲಿಯವರು ಮಾತನಾಡಲಿ. ಬನ್ನಿಕೋಡ್‌ರವರೇ ನೀವು ಪದೇ ಪದೇ ಎದ್ದು ನಿಂತರೆ ಹೇಗೆ ? ನಿಮಗೆ ಬೇಕಾದರೆ ಆಮೇಲೆ ಟೈಂ ಕೊಡುತ್ತೇನೆ. ಪದೇ ಪದೇ ಎದ್ದು ನಿಂತು ಮಾತನಾಡುವುದು ಬೇಡ.

(ಗೊಂದಲ)

ಛೇರ್ಮನ್:- ನೀವು ಲೀಡರ್ ಆಫ್ ದಿ ಅಪೋಸಿಷನ್ ಎಂದು ಪರ್ಮಿಷನ್ ಕೊಟ್ಟೆ. . . .

(ಗೊಂದಲ)

Sri.D.B.CHANDREGOWDA:- Who is he to say like that? Who is he ?

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ಜವಾಬ್ದಾರಿಯಿಂದ ಮಾತನಾಡಬೇಕಂತೆ. . . .

ಡಾ.ವೈ.ನಾಗಪ್ಪ:-ಈ ಸಭೆಯಲ್ಲಿ ಯಾವ ರೀತಿ ಮಾತನಾಡಬೇಕು, ಸಭೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಅವರಿಗೆ ಹೇಳಿ. I am also a responsible Member of this House.

(ಗೊಂದಲ)

ಛೇರ್ಮನ್:-ನಾನು ಹೇಳಲೆ? ಪದೇ ಪದೇ ಎದ್ದು ನಿಂತುಕೊಳ್ಳಬೇಡಿ. ನಾನು ಪರ್ಮಿಷನ್ ಕೊಟ್ಟಮೇಲೆ ಮಾತನಾಡಿ.

(ಗೊಂದಲ)

ಛೇರ್ಮನ್:- ನಾನು ಇಲ್ಲಿ ಕರೆಯದೆ ಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಇದು ಬಹಳ ಗೊತ್ತಿರುವ ವಿಚಾರ, ಏತಕ್ಕೆ ಮಾತನಾಡುವುದು. ಈಗ ಮಾನ್ಯ ವೀರಪ್ಪಮೊಯಿಲಿಯವರನ್ನು ಕರೆದಿದ್ದೇನೆ, ಅವರು ಮಾತನಾಡಲಿ.

ಶ್ರೀ ಎಂ.ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಎರಡು ನಿಲುವಳಿ ಸೂಚನೆಯ ನೋಟೀಸ್‌ಗಳನ್ನು ನಾನು ನೋಡಿದ್ದೇನೆ. ಒಂದು ಸನ್ಮಾನ್ಯ ಬಸವರಾಯರೆಡ್ಡಿಯವರದು, ಮತ್ತೊಂದು ಸನ್ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ಎರಡು ನೋಟೀಸ್‌ಗಳನ್ನು ನಾನು ನೋಡಿದ್ದೇನೆ. ಅದರಲ್ಲಿಯೂ ಕೂಡ ಏನಿದೆಯೆಂದರೆ ಕಲ್ಲು ಗಣಿ ಗುತ್ತಿಗೆ ನೀಡಿದ ವಿಷಯದಲ್ಲಿ ರಾಜ್ಯ ಹೈಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿ ಕುರಿತು ಎಂದು ಇದೆ. ಮಾನ್ಯ ಅಧ್ಯಕ್ಷರೆ,

ಪರಿಸ್ಥಿತಿ ಏನಾಗುತ್ತದೆ? ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರ ಹೇಳಿದರು. ಆ ವಿಚಾರವನ್ನು ಇದರಲ್ಲಿ ಕಾಣಿಸಿಲ್ಲ. ಅದೇನೆಂದರೆ, ಪರಿಸ್ಥಿತಿ ಎಂದರೆ ಏನು ಮಾಡಬೇಕು? ರಿಟ್ ಅಪೀಲ್ ಮಾಡಬೇಕೆ ಬಿಡಬೇಕೆ ಎಂದು ನಾವು ಅಗ್ರೀವ್ ಪಾರ್ಟೀಸ್ ಚಿಂತನೆ ಮಾಡುವುದೇ ಪರಿಸ್ಥಿತಿಯಾಗುತ್ತದೆ. ಅದಕ್ಕಿಂತ ಹೆಚ್ಚು ಪರಿಸ್ಥಿತಿ ಬರುವುದಿಲ್ಲ. ಆಮೇಲೆ if he has raised some substantive matter which has happened some time or today, yesterday or after the judgement or few days, which is contempleted under this rule, let him justify. ಅಂಥ ರೀಸನ್ಸ್ ಕೊಡಲಿ. ಆದರೆ ಇದನ್ನೇ ಇಟ್ಟುಕೊಂಡು ಈ ಜಡ್ಜ್‌ಮೆಂಟ್ ಬಗ್ಗೆ ವಿಚಾರವನ್ನು ನಮೂದಿಸಿ, ನಾನು ನೋಡಿದ್ದೇನೆ, ಲಾರಿ ಕೊಂಡು ಹೋಗುತ್ತಿತೆಂದರೆ how can you take cognizance of it? If he has framed the adjournment motion which is within the parameters that are prescribed under the adjournment motion rules, you can permit it. ಕೆಂಪು ಬಿಲ್ಡಿಂಗ್‌ನಲ್ಲಿ ಜಡ್ಜ್‌ಮೆಂಟ್ ಆಗುವುದು, ಇಲ್ಲಿ ಬಂದು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡುವುದು, ಇಲ್ಲಿ ಏನಾದರೂ ಮಾಡುವುದು ಅಲ್ಲಿ ಹೋಗುವುದು, I don't think such things are permitted. ಅಲ್ಲಿ ಅಪ್ರೊಪ್ರಿಯೇಟ್ ಕ್ಲಾಸ್ ಮೇಲೆ, ಅಪ್ರೊಪ್ರಿಯೇಟ್ ರೂಲ್‌ಮೇಲೆ, ಅವರು ಡಿಸ್‌ಕಷನ್‌ಗೆ ಏನಾದರೂ ಕೊಟ್ಟರೆ it is for you and the House to consider. ಆದರೆ ಇದರ ಮೇಲೆ ನಾವು ಚರ್ಚೆಯನ್ನು ಮಾಡುತ್ತಿದ್ದರೆ ಅದರಿಂದ ನಿಜವಾಗಿಯೂ ಏನು ಒಂದು ವಸ್ತು ಇದೆ, ಆ ವಸ್ತು ಸ್ಥಿತಿ ಬಗ್ಗೆ ವಿಕಲ್ಪತೆ ಮತ್ತು ವಸ್ತುಸ್ಥಿತಿ ಬಗ್ಗೆ ಒಂದು ರೀತಿ ನ್ಯಾಯವನ್ನು ಮಾಡಲಿಕ್ಕೆ ಅನ್ಯಾಯವಾಗಬಹುದು. ವಸ್ತುವಿನ ದೃಷ್ಟಿಯಲ್ಲಿ ಅದು ಉಪಯುಕ್ತವಾಗುವುದಿಲ್ಲ. ಅದನ್ನು ಮಾಡಲಿಕ್ಕೆ ಹೋದರೆ that instead of the Advocate General or the aggrieved party counsel discussing over the judgement, what to do next, we are discussing here. I don't think that kind of a situation can arise. It is just nothing but discussing a judgement. ಜಡ್ಜ್‌ಮೆಂಟ್ ವಿಚಾರದಲ್ಲಿ ಇವತ್ತು ಆ ಕಡೆಯಿಂದಾಗಲಿ, ಈ ಕಡೆಯಿಂದಾಗಲಿ, ಪರವಾಗಿ ಯಾಗಲಿ, ವಿರೋಧವಾಗಿಯಾಗಲಿ ಅಥವಾ ಒಂದು ತಟಸ್ಥ ನೀತಿಯನ್ನು ಅನುಸರಿಸಿದರೆ ಆ ಕೋರ್ಟಿನಲ್ಲಿರತಕ್ಕಂಥ ನ್ಯಾಯದ ದಾನಕ್ಕೆ ನ್ಯಾಯದ ಸ್ಥಿರತೆಗೆ ಇದರಿಂದ ಹೆಚ್ಚು ಧಕ್ಕೆ ಬರುತ್ತದೆಯೇ ಹೊರತು ನೀವಾಗಲಿ, ಈ ಕಡೆಯವರಾಗಲಿ ಏನೂ ಉಪಕಾರ ಮಾಡಿದಂತಾಗುವುದಿಲ್ಲ. Single Bench has given judgement. It may go to the High Court. If there is contempt, the parties concerned can always file contempt case. If there is any substantial administrative matter which requires consideration of the Government, I can agree that, but not under this not under the caption of this kind of a motion. I think the Hon'ble Speaker may kindly put a halt to such an unhealthy pracitce which may definitely destroy the kind of functioning of judiciary and it will definitely affect the proper and due discharge of administration of justice.

Sri.D.B.CHANDREGOWDA:- I need not learn lessons about the judiciary and interpretation of judgements on the floor of the House, from the Hon.Minister. ನಾವು ಏನಾದರೂ ಹೇಳುವುದಕ್ಕೆ ಹೋದರೆ ವಿವರಕ್ಕೆ

ಹೋಗಬೇಡಿ ಎಂದು ಕಟ್ಟಿಹಾಕುತ್ತೀರಿ.

ಶ್ರೀ ಎಂ.ವೀರಪ್ಪ ಮೊಯಿಲಿ:-ರೂಲ್ ಕಟ್ಟಿಹಾಕುತ್ತದೆ, ನಾವು ಯಾರನ್ನು ಕಟ್ಟಿಹಾಕುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ಹೈಕೋರ್ಟ್ ಜಡ್ಜ್‌ಮೆಂಟ್ ವಿಚಾರದಲ್ಲಿ ಈ ಸದನದಲ್ಲಿ ಯಾವ ಯಾವ ಕಾರಣಕ್ಕಾಗಿ ಚರ್ಚೆ ಮಾಡಬಾರದೆಂದು ಗೊತ್ತಿದೆ. I am not going to the merits of the case at all nor about the judgement. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಬ್ಬೊಬ್ಬ ಮತ್ರಿಗಳು ಒಂದೊಂದು ತರಹ ಇಂಟರ್‌ಪ್ರಿಟೇಷನ್ ಮಾಡುತ್ತಿದ್ದಾರೆ. ನಮ್ಮಲ್ಲಿ ಒಂದು ಮಾತು ಹೇಳುತ್ತಾರೆ. ರೆಡ್ಡಿ ಬಂದ ಮೊದಲಿನಿಂದ ಎತ್ತಿಕೋ ಎಂದು. ಬೆಳಕು ಹರಿಯುವತನಕ ನಾಟಕ ಆಗುತ್ತದೆಯಲ್ಲ ಆ ರೀತಿಯಾಗುತ್ತದೆ. ಒಬ್ಬ ಮಂತ್ರಿ ಬರುತ್ತಾರೆ ಒಂದೊಂದು ರೀತಿಯಲ್ಲಿ ಇಂಟರ್ ಪ್ರಿಟೇಷನ್ ಮಾಡುತ್ತಾರೆ.

ಶ್ರೀ ಎ.ಕೆ.ಅನಂತಕೃಷ್ಣ:-ಅದೇ ಮಾತನ್ನು ನಾನು ಆಗಲೆ ಹೇಳಿದೆ. ಇವರು ಈಗ ಬಂದರು ಎಂದು ಮತ್ತೆ ಚರ್ಚೆಗೆ ಶುರುಮಾಡಲಿಕ್ಕೆ ಆಗುತ್ತದೆಯೇ.

ಶ್ರೀ ಡಿ.ಬಿ.ಚಂದ್ರೇಗೌಡ:-ಕಾನೂನು ಮಂತ್ರಿಗಳು ಬಂದಾಯಿತು. ಆದಾದಮೇಲೆ ಸಂಸದೀಯ ಮಂತ್ರಿಗಳು ಬಂದಿದ್ದಾರೆ. Therefore, I am well aware of the fact that a judgement of the Hon'ble High Court cannot be called in question on the floor of this House. With due respect I submit through you to the Hon'ble Parliamentary Affairs Minister particularly, since this is not my subject matter for discussion. My subject matter for discussion is the situation arising after the judgement. That is all.

Mr.CHAIRMAN:- You have explained that already.

Sri. D.B.CHANDREGOWDA:- I am not particular with this adjournment motion. I want, in some form or the other such a matter of public importance should be discussed. I seek your permission as a Member.

ಶ್ರೀ ಬಸವರಾಜ್ ರಾಯರೆಡ್ಡಿ:- ನಾನು ಈಗಾಗಲೇ ಹೇಳಿದ್ದೇನೆ. ಗ್ರಾನೈಟ್ ವ್ಯವಹಾರದ ಬಗ್ಗೆ ಹೈಕೋರ್ಟ್ ತೀರ್ಪು ಕೊಟ್ಟಿದೆ. 13 ರಂದು ಜಡ್ಜ್‌ಮೆಂಟ್ ಆದಮೇಲೆ ಇವತ್ತಿನ ದಿನದವರೆಗೂ ಕೂಡ ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ಸಾಗಾಣಿಕೆ ಆಗುತ್ತಿದೆ.

ಛೇರ್ಮನ್:- ತಾವು ಮೆರಿಟ್ಸ್‌ಗೆ ಹೋಗುತ್ತಿದ್ದೀರಿ. ಜಡ್ಜ್‌ಮೆಂಟ್ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ನಿಮ್ಮ ಲೀಡರ್ ಕೂಡ ಒಪ್ಪಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಇಲ್ಲ. ನಾನು ಉಚ್ಚ ನ್ಯಾಯಾಲಯ ಏನು ತೀರ್ಪು ಕೊಟ್ಟಿದೆ ಅದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿ ಎಂದು ಮಾತನಾಡುತ್ತಿದ್ದೇನೆ.

ಛೇರ್ಮನ್:-ಅದು ಸಬ್‌ಜೆಕ್ಟ್ ಮ್ಯಾಟರ್ ಅಲ್ಲ. ಅದರ ಬಗ್ಗೆ ನಿಮ್ಮ ನಾಯಕರು ಹೇಳಿದ್ದಾರೆ. ಹೊಸ ಪಾಯಿಂಟ್ಸ್ ಇದ್ದರೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:- ಅವರ ನಿಲುವಳಿ ಸೂಚನೆ ಬೇರೆ. ನಾನು ಬೇರೆ ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಇದನ್ನು ಅರ್ಥ ಮಾಡಿಕೊಳ್ಳಿ. ಇವತ್ತಿಗೆ ಜಡ್ಜ್‌ಮೆಂಟ್ ಬಂದು 14 ದಿನಗಳಾದರೂ ಸರ್ಕಾರ ಈ ಶಿಲೆಗಳನ್ನು ಸಾಗಣೆ ಮಾಡುತ್ತಿರುವ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಉದಾಹರಣೆಗೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಇದನ್ನು ತಡೆಯುವುದಕ್ಕೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಛೇರ್ಮನ್:- ಇದು ರೆಕಾರ್ಡಿಗೆ ಹೋಗುವುದು ಬೇಡ. ನಾನು ಅದನ್ನು ಅಲೋ ಮಾಡುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:-ಕ್ಷಮಿಸಬೇಕು. ದಯವಿಟ್ಟು ನಾನು ಏನು ಮಾತನಾಡಬೇಕೆಂದು ಹೇಳಿದರೆ ಒಳ್ಳೆಯದು.

ಛೇರ್ಮನ್:- ಚಂದ್ರೇಗೌಡರು ಹೇಳದೆ ಬಿಟ್ಟಿದ್ದರೆ ಅಂಥಾದ್ದನ್ನು ಹೇಳಿ. ಡಿಲೇ ಕಂಡೋನ್ ಮಾಡುವುದಕ್ಕೆ . . . .

ಶ್ರೀ ಬಸವರಾಜ ರಾಯರೆಡ್ಡಿ:- 14 ದಿನಗಳಾದರೂ ಸರ್ಕಾರ ಕ್ರಮ ಕೈಗೊಳ್ಳಲು ವಿಫಲವಾಗಿದೆ, ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಮಾನ್ಯ ಸದಸ್ಯರು:- ಏತಕ್ಕೋಸ್ಕರ ಡಿಲೇ ಆಯಿತು ಎಂದು ಮನದಟ್ಟು ಮಾಡಿ.

ಛೇರ್ಮನ್:- ಎರಡು ಅಂಶಗಳು ಬೇಕಾಗಿರುವುದು. 13ರಂದು ಜಡ್ಜ್‌ಮೆಂಟ್ ಆಗಿದೆ, 27ಕ್ಕೆ ನೋಟೀಸ್ ಕೊಟ್ಟಿದ್ದೀರಿ. Why there is delay? Whether it amounts to a matter of urgency? ಇವು ಎರಡು ಹೇಳಿದರೆ ಸಾಕು.

ಶ್ರೀ ಬಸವರಾಜ್ ರಾಯರೆಡ್ಡಿ:- ಹೈಕೋರ್ಟ್ ತೀರ್ಪು 13 ರಂದು ಆದಮೇಲೆ ಅದರ ಪ್ರತಿ ಸಿಗಬೇಕಾದರೆ, ಬಹಳಷ್ಟು ತಡವಾಗುತ್ತದೆ. ನಾವು ವಕೀಲರಿಗೆ ಅದರ ಪ್ರತಿ ಬೇಕೆಂದು ಕೇಳಿದಾಗ ನಿನ್ನೆ ಮಾತ್ರ ಪ್ರತಿ ಕೈಗೆ ಸಿಕ್ಕಿತು. ಆದುದರಿಂದ ವಿಳಂಬವೇನು ಆಗಿಲ್ಲ. ನಿನ್ನೆ ನಮ್ಮ ಕೈಗೆ ಉಚ್ಚ ನ್ಯಾಯಾಲಯದ ಆಜ್ಞೆಯ ಪ್ರತಿ ಸಿಕ್ಕಿರುವುದರಿಂದ ವಿಳಂಬವಾಗಿಲ್ಲ. ಆದುದರಿಂದ ದಯವಿಟ್ಟು ನನ್ನ ನಿಲುವಳಿ ಸೂಚನಗೆ ಅನುಮತಿ ಕೊಡಬೇಕು. ಮುಖ್ಯವಾಗಿ ರಾಜ್ಯದ ಆದಾಯದ ಹಿತದೃಷ್ಟಿಯಿಂದ ಈ ಶಿಲೆಗಳ ಸಾಗಾಣಿಕೆಯನ್ನು ಕೂಡಲೇ ತಡೆಹಿಡಿಯಬೇಕು. ಈಗ ಏನಾಗಿದೆ ಎಂದರೆ ರಾಜ್ಯದಲ್ಲಿ 18-6-91 ರಿಂದ 177 ಕಂಪನಿಗಳ ಅನುಮತಿ ಕೊಟ್ಟಿದ್ದೀರಿ. ಆದರಲ್ಲಿ ಒಂದೇ ಕಂಪನಿಗೆ 34 ಬಂದಿದೆ.

ಛೇರ್ಮನ್:- ಅದು ಮೆರಿಟ್ಸ್ ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ:- ಮೈಸೂರ್ ಮಿನರಲ್ಸ್ ಲಿಮಿಟೆಡ್‌ಗೆ ಕೇವಲ14 ಲೀಸ್‌ಗಳನ್ನು ಕೊಟ್ಟಿದ್ದೀರಿ.

ಛೇರ್ಮನ್:- ಅಲೋ ಆದರೆ ಮೆರಿಟ್ಸ್ ಮೇಲೆ ಎಷ್ಟು ಬೇಕಾದರೂ ಹೇಳಿ. ತಿರುಗಿ ನೀವು ಮೆರಿಟ್ಸ್‌ಗೆ ಹೋಗಬಾರದು.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಮೆರಿಟ್ ಅಲ್ಲ.

ಛೇರ್ಮನ್:- ಮಾನ್ಯ ಬನ್ನಿಕೋಡ್ ಅವರಿಗೆ ಗೊತ್ತಿದೆ, ಅಡ್ವೋಕೇಟ್ ಆಗಿ ಎಮರ್ಜಂಟಾಗಿ.....

ಛೇರ್ಮನ್:-ನಾನು ವಕೀಲ. ಎಮರ್ಜಂಟ್ ಫೀಸ್ ಕೊಟ್ಟಿದ್ದರೆ ಮಾರನೇ ದಿವಸವೇ ಜಡ್ಜ್‌ಮೆಂಟ್ ಕಾಪಿ ಕೊಡುತ್ತಾರೆ. ಅದು ನಿಮಗೆ ಗೊತ್ತಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಹಾಗಾದರೆ ನಾನು ಮಾತನಾಡುವುದಕ್ಕೆ ಅವಕಾಶ ಇಲ್ಲ. ಕುಳಿತುಕೊಳ್ಳಬೇಕಾಗುತ್ತದೆ.

ಛೇರ್ಮನ್:- ನಾನು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದೇನೆ. ಮೆರಿಟ್ಸ್‌ಗೆ ಹೋಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ:- ಈ ವಿಷಯದಲ್ಲಿ ವಿಳಂಬವಾಗಿಲ್ಲ. ನಿನ್ನೆ ಕಾಪಿ ಸಿಕ್ಕಿದೆ. ದಯವಿಟ್ಟು ನಾನು ಏನು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಅದಕ್ಕೆ ಅನುಮತಿ ಕೊಡಿ. ನಿಲುವಳಿ ಸೂಚನೆ ಮೇಲೆ ಅವಕಾಶ ಕೊಡುವುದಕ್ಕೆ ಆಗದೆ ಇದ್ದರೆ ಕೊನೆಗೆ ಅರ್ಧ ಗಂಟೆ ಚರ್ಚೆಗಾದರೂ ಅವಕಾಶ ಮಾಡಿಕೊಡಿ. ಏಕೆಂದರೆ, ರಾಜ್ಯಕ್ಕೆ ಬಹಳ ಅನ್ಯಾಯವಾಗುತ್ತಿದೆ. ಒಂದು ಸಾವಿರ ಕೋಟಿ ರೂಪಾಯಿ . . . .

ಒಬ್ಬ ಮಾನ್ಯ ಸದಸ್ಯರು:- ತಾವು ರೂಲಿಂಗ್ ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ - ಮಾನ್ಯ ಅಧ್ಯಕ್ಷರೇ, ಇವತ್ತು ಏನಾಗಿದೆ, ಒಂದು . . . . .

ಛೇರ್ಮನ್:- ನಿಮ್ಮ ಲೀಡರ್‌ಗೆ ಗೊತ್ತಿದೆಯಲ್ಲ. ಅರ್ಧ ಗಂಟೆ ಚರ್ಚೆಗೆ ಬೇರೆ ನೋಟೀಸ್ ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ:- ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಯಾವುದಾದರೂ ಒಂದರಲ್ಲಿ ನಮಗೆ ಅವಕಾಶ ಕೊಡಿ. ಏಕೆಂದರೆ ರಾಜ್ಯದ ಬೊಕ್ಕಸಕ್ಕೆ . . . .

ಛೇರ್ಮನ್:- ಬರೆದು ಕಳುಹಿಸಿ . . . .

ಶ್ರೀ ಬಸವರಾಜ ರಾಯರೆಡ್ಡಿ:- ರಾಜ್ಯದ ಬೊಕ್ಕಸಕ್ಕೆ ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿ ಹಾನಿಯಾಗುತ್ತದೆ.

ಛೇರ್ಮನ್:-ಮೆರಿಟ್ಸ್‌ಗೆ ಹೋಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ:- ಈಗ ವಿಳಂಬವಾಗಿದೆ. ದಯವಿಟ್ಟು ಇದಕ್ಕೆ ಅನುಮತಿ ಕೊಡಿ. ನಾನು ಏತಕ್ಕೆ ಈ ವಿಚಾರ ಹೇಳುತ್ತೇನೆ ಅಂದರೆ, ನಮ್ಮ ರಾಜ್ಯದಲ್ಲಿ ಸಿಕ್ಕುವಂಥ ಗ್ರಾನೈಟ್ಸ್ ಏನಿದೆ ಅದು ವಿಶ್ವದ ಮಾರುಕಟ್ಟೆಯಲ್ಲಿ ಅತ್ಯಂತ ದುಬಾರಿ ಇದೆ. ಒಂದೊಂದು ಕ್ಯುಬಿಕ್ ಮೀಟರ್‌ಗೆ ಮಿನಿಮಂ 600 ಡಾಲರ್ ಇದೆ. 600 ಡಾಲರ್‌ನಿಂದ 2000 ಡಾಲರ್‌ವರೆಗೂ ಇದೆ.

ಛೇರ್ಮನ್:-ಅದರ ಬಗ್ಗೆ ಇಲಾಖಾ ಮಂತ್ರಿಗಳು ಹೇಳಿದ್ದಾರೆ. ಎಷ್ಟು ಕಳೆದು ಕೊಳ್ಳುತ್ತಿದ್ದೆವು, ಎಷ್ಟು ಬರುತ್ತಿತ್ತು ಏನು ಮಾಡಬೇಕು ಎಂಬುದು ಹೇಳಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಹೊಸ ಗ್ರಾನೈಟ್ ಸಿಕ್ಕಿದೆ ಗ್ಯಾಲಕ್ಸಿ ಎಂದು ಗ್ಯಾಲಕ್ಸಿ. ಗ್ರಾನೈಟ್ ಒಂದು ಕ್ಯುಬಿಕ್ ಮೀಟರ್‌ಗೆ 2300 ಡಾಲರ್ಸ್ ಇದೆ.

(ಗೊಂದಲ)

ಶ್ರೀ ಗುರುದೇವ್:- ಅವರು ಇಲಾಖಾ ಬೇಡಿಕೆ ಮೇಲೆ ಮಾತನಾಡಬಹುದಾಗಿತ್ತು. ಆ ಅವಕಾಶ ಕಳೆದುಕೊಂಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ದಯವಿಟ್ಟು ಅದನ್ನು ರಾಷ್ಟ್ರೀಕರಣ ಮಾಡಿ.

ಶ್ರೀ ಬಿ.ಹೆಚ್.ಬನ್ನಿಕೋಡ್:-ಅವರು ಚರ್ಚೆಗೆ ತಡೆ ಮಾಡುವುದು ನೋಡಿದರೆ ಬಹಳ ಜನರಿಗೆ ಇದರ ಬಗ್ಗೆ ಆಸಕ್ತಿ ಇದ್ದಹಾಗೆ ಕಾಣುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ:- ನಾನು ನಿಲುವಳಿ ಸೂಚನೆ ಕಳುಹಿಸಿದ್ದೇನೆ.

ಛೇರ್ಮನ್:-ತುಂಬಾ ಆಪರ್ಚುನಿಟಿ ಕೊಟ್ಟಿದ್ದಾರೆ. ನಿಮ್ಮ ಲೀಡರ್ಸ್‌ಗೆ ಗೊತ್ತಿದೆ. ಅವರು ಕನ್‌ವಿನ್ಸ್ ಆಗಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ:- ಅಧ್ಯಕ್ಷರೇ, ಅವರು ಆದಮೇಲೆ . . . .

ಛೇರ್ಮನ್:- ಅವರು ಈಲ್ಡ್ ಆಗಲಿ ಜಯಚಂದ್ರ ಅವರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್.ಬನ್ನಿಕೋಡ್:- ನಾವು ಮಾತನಾಡಿದರೆ ಅವರಿಗೇನಾದರೂ ಭಯ ಇದೆಯೆ ? ಬಾಯಿ ಬಡಿಯುವ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

ಛೇರ್ಮನ್ :- ಅವರಿಗೆ ಅವಕಾಶ ಕೊಡಿ. ನಾನು ಕರೆದಿದ್ದೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಕೊಟ್ಟಾಗಿದೆಯಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:- ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಬಹಳ ಅವಶ್ಯ ಎಂದು ಕಾಣುತ್ತದೆ.

ಛೇರ್ಮನ್:-ನೀವು ಯಾವುದಕ್ಕೆ ಕಳುಹಿಸಬೇಕು ಎಂದು ಪ್ರಪೋಸ್ ಮಾಡಿ ಕಳಿಸೋಣ. ನಮ್ಮ ಲೀಡರ್‌ಗೆ ಹೇಳಿದರೆ ಅವರು ಅದಕ್ಕೆ ಏರ್ಪಾಡು ಮಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಐ.ಎ.ಎಸ್ ಮತ್ತು ಕೆ.ಎ.ಎಸ್ ಅಧಿಕಾರಿಗಳಿಗೆ ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ತೆಗೆದಿದ್ದಾರೆ. ಅದೇರೀತಿ ಸದಸ್ಯರಿಗೆ ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ಹೇಗೆ ಹೇಗೆ ವರ್ತನೆ ಮಾಡಬೇಕು ಎಂಬುದು ಗೊತ್ತಾಗುತ್ತದೆ.

ಛೇರ್ಮನ್:-ಈ ಮ್ಯಾಟರ್ ಕ್ಲೋಸ್ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ:-ನನಗೆ ಐದು ನಿಮಿಷ ಅವಕಾಶ ಕೊಡಿ. ನಾನು ಮೆರಿಟ್ ಮೇಲೆ ಹೋಗುತ್ತಿಲ್ಲ.

ಛೇರ್ಮನ್:-ಮೆರಿಟ್ ಮೇಲೆ ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದು ಬೇಡವೇ?

ಶ್ರೀ ಬಸವರಾಜ ರಾಯರೆಡ್ಡಿ:- ರಾಜ್ಯದಲ್ಲಿ ಇದರ ಪರಿಣಾಮ ಏನಾಗಿದೆ ಎನ್ನುವುದರ ಬಗ್ಗೆ ಮಾತವಾಡುತ್ತಿದ್ದೇನೆಯೇ ಹೊರತು ಮೆರಿಟ್ಸ್ ಬಗ್ಗೆ ಮಾತನಾಡುತ್ತಿಲ್ಲ. ನಿಲುವಳಿ ಸೂಚನೆಗೆ ತಾವು ಏತಕ್ಕೆ ಅನುಮತಿ ಕೊಡಬೇಕು ಎಂದು ಹೇಳುತ್ತಿದ್ದೇನೆ. ತಾವು ಅಡ್ವೊಕೇಟ್. . . . .

ಛೇರ್ಮನ್:-ನೀವು ಅಡ್ವೊಕೇಟ್ ಎಂದಿದ್ದಕ್ಕೆ ಒಂದು ವಿಚಾರ ಹೇಳುತ್ತಿದ್ದೇನೆ. ಜಡ್ಜ್‌ಮೆಂಟ್ ಇದೆ. ಅದು ಫೈನಲ್ ಅಲ್ಲ. ಅಪೀಲಬಲ್ ಇದೆ, ರಿವಿಷನ್ ಹಾಕಬಹುದು. ಫುಲ್ ಬೆಂಚ್‌ಗೆ ಹೋಗಬಹುದು. ಮೆರಿಟ್ಸ್ ಮೇಲೆ ನೀವು ಮಾತನಾಡಿ ಪೇಪರ್‌ನಲ್ಲಿ ನಾಳೆ ಬಂದರೆ Will it not prejudice the judges? ಆದ್ದರಿಂದ ಮೆರಿಟ್ ಮೇಲೆ ಮಾತನಾಡುವುದು ಬೇಡ. ಇದನ್ನು ಅಲೋ ಮಾಡುವುದಕ್ಕೆ ರೀಸನ್ಸ್ ಏನಿದೆ ಅಷ್ಟು ಹೇಳಿದರೆ ಸಾಕು.

ಶ್ರೀ ಬಸವರಾಜ ರಾಯರೆಡ್ಡಿ:- ಇದನ್ನು ರಾಜ್ಯದ ಹೈಕೋರ್ಟ್ ಬೆಂಚ್‌ನಲ್ಲಿ ಪ್ರಶ್ನಿಸಬಹುದು. ನಂತರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬಹುದು. ಆದರೆ ನನ್ನ ವಿಚಾರ ಏನೆಂದರೆ, ಈಗಾಗಲೇ ಒಬ್ಬ ನ್ಯಾಯಮೂರ್ತಿಗಳು ಇದು ಕಾನೂನು ಬಾಹಿರ ಮತ್ತು ಅಕ್ರಮವಾಗಿದೆ ಎಂದು ಏನು ತೀರ್ಪು ಕೊಟ್ಟಿದ್ದಾರೆ ಅದರ ಮೇಲೆ ಸರ್ಕಾರ ದಯವಿಟ್ಟು ಅಪೀಲ್ ಹೋಗುವುದು ಬೇಡ. ಏತಕ್ಕೆ ಹೇಳುತ್ತೇನೆಂದರೆ, ದಯವಿಟ್ಟು ಗ್ರಾನೈಟ್ ರಾಷ್ಟ್ರೀಕರಣ ಮಾಡಿ.

ಛೇರ್ಮನ್:- ಬೇರೆ ವಿಚಾರ ಅದು. ಇದಕ್ಕೆ ನೀವು ಇದವರೆಗೂ ಕನ್‌ವಿನ್ಸ್ ಮಾಡಲೇ ಇಲ್ಲ. I will have to close this subject.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಸಾವಿರಾರು ಕೋಟಿ ರೂಪಾಯಿಗಳ ಮೇಲೆ ಹೋಗುತ್ತದೆ. ಕೇವಲ 50 ಜನರಿಗೆ ಪರ್ಮಿಟ್ ಕೊಟ್ಟು ಸಾವಿರಾರು ಕೋಟಿ ರೂಪಾಯಿಗಳು ಹೋಗುತ್ತಿದೆ. ಮೈಸೂರು ಮಿನರಲ್ಸ್ ಏತಕ್ಕೆ ಇರುವುದು? ಅದನ್ನು ಏತಕ್ಕೆ ಮಾಡಿದ್ದೀರಿ? It is a public undertaking.

Mr.CHAIRMAN:- The matter is closed.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೈಕೋರ್ಟ್ ಜಡ್ಜ್‌ಮೆಂಟ್ ವಿರುದ್ಧ ಮಾತನಾಡುತ್ತಿಲ್ಲ. ಅದನ್ನು ಇಂಪ್ಲಿಮೆಂಟ್ ಮಾಡಿ, ಮೇಲ್ಮನವಿ ಸಲ್ಲಿಸಬೇಡಿ, ಅನೇಕ ಶಾಸಕರ ಮಂತ್ರಿಗಳ ಹೆಸರು ಇದೆ . . . .

(ಗೊಂದಲ)

Mr.CHAIRMAN:- Nothing will go on record. I withhold the consent. Now the Hon.Chief Minister to reply.

ಶ್ರೀ ಡಿ.ಬಿ.ಚಂದ್ರೇಗೌಡ:- ಚರ್ಚೆ ಮಾಡುವುದಕ್ಕೆ ಸರ್ಕಾರ ಒಪ್ಪುವುದಿಲ್ಲ. ಇಂತಹ ಒಂದು ರಾಜ್ಯದಲ್ಲಿ . . . .

ಛೇರ್ಮನ್:-ಕಾನೂನಿನಲ್ಲಿ ಬೇರೆ ಬೇರೆ ಭಾಗ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:-ಬೇರೆ ಬೇರೆ ಭಾಗ ಇದೆ. ಅದು . . . .

ಛೇರ್ಮನ್:-ನೋಟೀಸ್ ಕೊಡಿ ಸರ್.

ಶ್ರೀ ಡಿ.ಬಿ.ಚಂದ್ರೇಗೌಡ:- ಇಲ್ಲಿ ಹಿಂದೆ ಚರ್ಚೆ ಆಗಿದೆ, ಉತ್ತರ ಕೊಟ್ಟಿದ್ದಾರೆಂದರೆ ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆಮಾಡೋಣ ಎನ್ನುವುದಕ್ಕೆ ಸಿದ್ಧವಾಗದೇ ಇದ್ದರೆ, ತಾಂತ್ರಿಕ ಕಾರಣ ಹೇಳಿ, ಹಿಂದೆ ಹೇಳಿದ್ದೇವೆ, ಡಿಮ್ಯಾಂಡ್ ಮೇಲೆ ಚರ್ಚೆಯಾಗಿದೆ, ಉತ್ತರ ಕೊಟ್ಟಿದ್ದೇವೆ ಎಂದರೆ ಇಂತಹ ಒಂದು ರಾಜ್ಯದ ಹಿತದ ವಿಚಾರದಲ್ಲಿ ಕೂಡ ಸರ್ಕಾರ ಇಂತಹ ಮೊಂಡು ನಿಲುವನ್ನು, ಧೈರ್ಯವನ್ನು . . . .

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:-ವಿಧಾನ ಸಭೆಯಲ್ಲಿ ಉತ್ತರ ಕೊಡುತ್ತಾರೆಂದು ಹೇಳಿ . . . .

ಛೇರ್ಮನ್:- ಮಾನ್ಯ ಮುಖ್ಯಮಂತ್ರಿಗಳು ಅಲ್ಲದೇ ಬೇರೆ ಯಾರೂ ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಈ ಸಮಯದಲ್ಲಿ ವಿರೋಧಪಕ್ಷದ ನಾಯಕರು ಮತ್ತು ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ಇದುವರೆವಿಗೂ ಬಂದಿರುವ ಸಂಪ್ರದಾಯ ಏನು ? ನಿಲುವಳಿ ಸೂಚನೆಯ ಬಗ್ಗೆ . . . .

ಛೇರ್ಮನ್:-ನಿಲುವಳಿ ಸೂಚನೆಯನ್ನು ಕನ್ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ನೀವು ಬರೆದು ಕಳುಹಿಸಿ. ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ತೆಗೆದುಕೊಂಡು ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದರಲ್ಲಿ ಬರುವುದಿಲ್ಲವಾದರೆ ಈಗ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಛೇರ್ಮನ್:-ನೀವು ಬರೆದು ಕಳುಹಿಸಿ. ಈಗ ಕನ್ವರ್ಟ್ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಛೇರ್ಮನ್:- ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏಕೆ ಮಾತನಾಡುತ್ತೀರಿ ಮತ್ತೆ ? ಪ್ರಯೋಜನ ಏನು ? ಏನಾದರೂ ಪ್ರಯೋಜನ ಇದ್ದರೆ ಮಾತನಾಡಿ. ಯಡಿಯೂರಪ್ಪನವರೇ, ನಿಮ್ಮ ಸದಸ್ಯರಿಗೆ ಸ್ವಲ್ಪ ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಆಗುವುದಿಲ್ಲ ಎಂದು ಹೇಳಿದಿರಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಛೇರ್ಮನ್:-ಬರೆದು ಕಳುಹಿಸಿ. I have already given my ruling.

ಶ್ರೀ ಬಿ.ಎಸ್.ಯಡಿಯೂರಪ್ಪ:- 500 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಲೂಟಿಯಾಗುತ್ತಿದೆ. ಶಾಸಕರ ಹೆಸರು ಇದೆ, ಮಂತ್ರಿಗಳ ಹೆಸರೂ ಇದೆ, ಅವರಿಗೆ ಬೇಕಾದವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಎಲ್ಲಾ ಚರ್ಚೆಯಾಗುತ್ತಿದೆ. ಸದನ ಸಮಿತಿ ಮಾಡಿದರೆ . . . .

ಛೇರ್ಮನ್:- ಚರ್ಚೆ ಮಾಡಬೇಡಿ ಎಂದು ಎಲ್ಲಾದರೂ ಹೇಳಿದ್ದೇವೆಯೇ ? ಬರೆದು ಕೊಡಿ ಎಂದು ಹೇಳಿದ್ದೇವೆ. ಅವರು ಬರೆದು ಕೊಡಬೇಡಿ ಎಂದು ಹೇಳಿಲ್ಲ. ನೀವು ಬರೆದು ಕೊಡಿ ಕಾನೂನು ಬದ್ಧವಾಗಿದ್ದರೆ, ಅವಕಾಶ ಮಾಡಿಕೊಡೋಣ. ಅವಕಾಶ ಇದ್ದರೆ ಚರ್ಚೆ ಆಗಲಿ. ಏನಿದ್ದರೂ ಬರೆದುಕೊಡಿ. ಅದನ್ನು ಕಾನೂನು ಬದ್ಧವಾಗಿದ್ದರೆ ಮಾಡೋಣ. ಅವಕಾಶ ಇದ್ದರೆ ಆಗಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಲೈಸೆನ್ಸ್ ಕೊಟ್ಟಿರುವ ಕಡೆ ಮಂತ್ರಿಗಳ ಹೆಸರು ಇದೆ . . . .

ಛೇರ್ಮನ್:-ಅದು ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನಿದ್ದರೂ ತಾವು ಬರೆದು ಕಳುಹಿಸಿ.

(ಈ ಸಮಯದಲ್ಲಿ ಭಾರತೀಯ ಜನತಾ ಪಾರ್ಟಿ ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು.)

1992-93ನೇ ಸಾಲಿನಲ್ಲಿ ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಸ್.ಬಂಗಾರಪ್ಪ:- (ಮುಖ್ಯ ಮಂತ್ರಿಯವರು):-ಮಾನ್ಯ ಸಭಾಧ್ಯಕ್ಷರೆ, ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಸದಸ್ಯರು, ಅನೇಕ ಜನ ಮಾನ್ಯ ಮಿತ್ರರು ಚರ್ಚೆಯಲ್ಲಿ ಭಾಗವಹಿಸಿ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ವಿರೋಧಪಕ್ಷದವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕ ಸಂದರ್ಭ ನನಗೆ ಸಿಗಲಿಲ್ಲವೆಂದು ನನ್ನ ಮನಸ್ಸಿಗೆ ನೋವಾಗಿದೆ. ಏಕೆಂದರೆ ಎಷ್ಟೋ ಸಾರಿ ವಿನಂತಿ ಮಾಡಿದರೂ ಕೂಡ ಅವರು ಬಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ನಾನು ಒಂದು ಮಾತಿನ ಪ್ರಯೋಗ ಮಾಡಿದರೆ ರಾಜ್ಯದ ಜನತೆ ತಿಳಿದುಕೊಳ್ಳಲಾರರು ಎಂದು ಭಾವಿಸಿದ್ದೇವೆ. ಅವರ ಮೊಂಡುತನ ಇವತ್ತು ಚರ್ಚೆಯಿಂದ ಬಲು ದೂರ ಅವರನ್ನು ಇಟ್ಟಿದೆ. ಅದಕ್ಕಾಗಿ ನನಗೆ ನೋವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರ ಆದಿಯಾಗಿ ಬನ್ನಿ ಈಗಲಾದರೂ ಚರ್ಚೆಯಲ್ಲಿ ಭಾಗವಹಿಸಿ ಎಂದು ನಾನು ನಿನ್ನೆ ಹೇಳಿದೆ. ಅವರು ಇಲ್ಲ, ನಾವು ಡಿಮಾಂಡ್ಸ್ ಮೇಲಿನ ಚರ್ಚೆಗೆ ಬರುವುದಿಲ್ಲವೆಂದರು. ಆದರೆ ನನಗೆ ಗೊತ್ತಿದೆ. ಅಪ್ರೊಪ್ರಿಯೇಷನ್ ಬಿಲ್ಲಿಗೆ ಬಂದು ಬೆಂಬಲ ಕೊಡುತ್ತೇವೆ ಎನ್ನುವ ಮಾತನ್ನು ಆಡಿದ್ದಾರೆ. ಅದಕ್ಕಾದರೂ ಬಂದು ಭಾಗವಹಿಸಲಿಯೆಂದು ನಾನು ಮತ್ತೊಮ್ಮೆ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರದ ಆದ್ಯಕರ್ತವ್ಯ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆಯಾಗಿರತಕ್ಕ ಸಂದರ್ಭದಲ್ಲಿ ನಾನು ಮತ್ತು ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಮಂಜುನಾಥ್‌ರವರು, ಸಣ್ಣ ಉಳಿತಾಯ ಖಾತೆಯ ರಾಜ್ಯ ಸಚಿವರು, ನಾವೆಲ್ಲರೂ ಉತ್ತರ ಕೊಡತಕ್ಕ ಸಂದರ್ಭ ಇದೆ. ಇದು ಆದಮೇಲೆ ಧನ ವಿನಿಯೋಗ ಮಸೂದೆ ಅಂದರೆ ಅಪ್ರೊಪ್ರಿಯೇಷನ್ ಬಿಲ್ ಬರತಕ್ಕದ್ದು ಇದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಲ್ಲ ಬೇಡಿಕೆಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯದ ಜನತೆಯ ಪ್ರತಿನಿಧಿಗಳಾಗಿ ಜನತೆಯ ಹಿತದೃಷ್ಟಿಯಿಂದ ತಾವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ತಾವು ಆ ಕರ್ತವ್ಯವನ್ನು ನೆರವೇರಿಸಿದ್ದೀರಿ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಡಿಮಾಂಡ್ ನಂಬರ್ 15 ರಿಂದ42ರವರೆಗೆ ನನಗೆ ಸಂಬಂಧಪಟ್ಟಿದ್ದು. ಈ ಇಲಾಖೆಗಳ ಮೇಲೆ ಮಾತನಾಡಿರತಕ್ಕ ಹಿರಿಯ ಸದಸ್ಯರು, ಕಿರಿಯ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಅವರು ಏನೇನು ಪ್ರಾಮುಖ್ಯವಾದ ವಿಚಾರಗಳನ್ನು ಹೇಳಿದ್ದಾರೆ, ಅದಕ್ಕೆ ಅನಂತರ ಬರುತ್ತೇನೆ. ಮಾತವಾಡಿರತಕ್ಕ ಹಿರಿಯ ಸದಸ್ಯರುಗಳಾದ ಮಾನ್ಯ ಎ.ಕೆ. ಅನಂತಕೃಷ್ಣ, ವಿಶ್ವನಾಥ್, ಇದಿನಬ್ಬ, ರಾಜೂಗೌಡ, ವಾಟಾಳ್ ನಾಗರಾಜ್, ಶ್ರೀಮತಿ ರೇಣುಕರಾಜೇಂದ್ರ, ಕೆ.ಸಿದ್ದಯ್ಯ ಇತ್ಯಾದಿ ಇದ್ದರೆ ಉಳಿದಿರತಕ್ಕ ಸದಸ್ಯರು ಮಾನ್ಯ ಕರಿಯಣ್ಣನವರು, ಶಿವರಾಮೇಗೌಡರು, ಬಾಬುರಾವ್‌ಚವಾಣ್, ಇತ್ಯಾದಿ ಮಾನ್ಯ ಸದಸ್ಯರುಗಳು ಇದ್ದಾರೆ. ನಾನು ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಬಹಳವಿವರವಾಗಿ ಮಾತನಾಡಿದ್ದಾರೆ. ಶ್ರೀಮಾನ್ ಅನಂತಕೃಷ್ಣರವರು ಮತ್ತಿತರ ಮಾನ್ಯ ಸದಸ್ಯರು ಯಾರೇ ಇರಬಹುದು ಅವರೆಲ್ಲ ನಮ್ಮ ಆಡಳಿತ ಯಂತ್ರದ ಬಗ್ಗೆ, ಜಿಎಡಿ, ಜನರಲ್ ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಆಡಳಿತ ಯಂತ್ರ ಯಾವರೀತಿ ಇದೆ, ಹೇಗೆ ಹೋಗಬೇಕು ಎನ್ನುವ ವಿಚಾರದಲ್ಲಿ